ಜನಪದ ವಿಚಾರ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೭ ಆಗಸ್ಟ್-೨೦೦೬ ಸಂಚಿಕೆ-೧



ಶಿಥಿಲಗೊಳ್ಳುತ್ತಿರುವ ನಮ್ಮ ಸ್ವಾತಂತ್ರ್ಯ

ಜನಪದ ವಿಚಾರದಲ್ಲಿ

೧) ಶಿಥಿಲಗೊಳ್ಳುತ್ತಿರುವ ನಮ್ಮ ಸ್ವಾತಂತ್ರ್ಯ ಪುಟ-೦೩

-ಸುರೇಂದ್ರ ಕೌಲಗಿ

ಸ್ವಾತಂತ್ರ್ಯ ಶಿಥಿಲಗೊಳ್ಳುತ್ತಿದೆಯೆಂಬ ಮಾತೇ ಸಂಕಟವನ್ನು ಉಂಟುಮಾಡುವಂತದ್ದಾಗಿದೆ. ಆದರೆ ವಾಸ್ತವಿಕತೆಯನ್ನು ಮರೆಯುವಂತಿಲ್ಲವಷ್ಟೆ. ಇಂಥ ಭಾವನೆಗಳಿಂದ ಕೂಡಿದ ಲೇಖನವಿದು.

೨) ದಲಿತ ಚಳುವಳಿಯ ಜನಕ ಕುದ್ಮುಲ್ ರಂಗರಾವ್ ಪುಟ-೦೯

-ಮುಗಳವಳ್ಳಿ ಕೇಶವ ಧರಣಿ

ದಲಿತ ಚಳುವಳಿಯ ಜನಕನೊಬ್ಬನ ಸಂಕ್ಷಿಪ್ತ ಜೀವನ ಚರಿತ್ರೆಯನ್ನು ದಾಖಲಾಗಿರಿಸುವ ನಿಟ್ಟಿನಲ್ಲಿ ಈ ಲೇಖನ ಪ್ರಕಟಗೊಂಡಿದೆ.

೩) ಕ್ರೈಸ್ತ ಮತಾಂತರ ಪುಟ-೧೫

-ಗಾಂಧೀ

೪) ಹಳ್ಳಿಯ ಹೈದ ಉಕ್ಕಿನ ಮನುಷ್ಯನಾದುದು ಪುಟ-೧೬

-ಸುಭಾಷ್ ಹೂಗಾರ

ಸ್ವಾತಂತ್ರ್ಯಬಂದ ಮೇಲೆ ಭಾರತ ತನ್ನ ಸಾಹಸದಿಂದ ಎಲ್ಲ ಕ್ಷೇತ್ರಗಳಲ್ಲಿ ಸ್ವಾವಲಂಭಿತವಾಗಬೇಕಾಗಿದೆ. ಸಾಮಾನ್ಯ ಹಳ್ಳಿಯ ಬಾಲಕನಲ್ಲಿ ಅಂಥ ಛಲವಿರುವುದನ್ನು ಈ ಲೇಖನ ಎತ್ತಿ ತೋರಿಸಿದೆ.

೫) ಸಾಮಾನ್ಯವಲ್ಲದ ಒಂದು ಚಿತ್ರದ ಕಥೆ ಪುಟ-೧೯

-ಮನೋರಮಾ ರತ್ನಾಕರ್

ಪ್ರಪಂಚದಾದ್ಯಂತ 'ಡಾ ವಿಂಚಿ ಕೋಡ್' ಎಂಬ ಹೆಸರಿನಲ್ಲಿ ವಿವಾದಕ್ಕೊಳಗಾದ ಚಿತ್ರದ ಹಿನ್ನೋಟ ಈ ಲೇಖನದಲ್ಲಿದೆ.

೬) ಸಮಾಜವಾದಿಯ ಕನಸಿನ ಮೇಲೆ ಬೆಳಕು ಪುಟ-೨೩

-ರಾಮಚಂದ್ರ ದೇವ

೭) ಅಸ್ಪೃಶ್ಯತಾ ನಿವಾರಣೆಯ ಹಗ್ಗಜಗ್ಗಾಟ
ಒಂದು ಆಲೋಚನೆ ಪುಟ-೨೫

-ಎಲ್. ನರಸಿಂಹಯ್ಯ ತೊಂಡೋಟಿ

೮) ರಾಜಕೀಯ ಅಧಿಕಾರ ಮತ್ತು ಸಾಮಾಜಿಕ ಸುಧಾರಣೆ ಪುಟ-೨೮

-ಮಹಾತ್ಮ ಗಾಂಧೀ

೯) ಜನಪದ ನಿಲಯದ ಅಂತರಂಗದಲ್ಲಿ................೩೩ ಪುಟ-೩೧

ಜನಪದ ವಿಚಾರ
ತಿಂಗಳ ವೈಚಾರಿಕ ಡೈಜೆಸ್ಟ್
ಆಗಸ್ಟ್-೨೦೦೬
ಸಂಪುಟ-೭
ಸಂಚಿಕೆ-೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧ ೪೩೧
ಮಂಡ್ಯ ಜಿಲ್ಲೆ

(08236)298754
e-mail-janapada@yahoo.com
www.janapada.org

ಮರೆಯುವುದೆಂತಾ ನಮ್ಮ ಸ್ವಾತಂತ್ರ್ಯಶಿಲ್ಪಿಯಂ
ದಿವ್ಯದಿನದೀ ಶುಭಮುಹೂರ್ತದಲ್ಲಿ?
ಮರೆವುದೆಂತಯ್ ಭುವನಗೌರವ ಮಹಾತ್ಮನಂ
ಸ್ವಾತಂತ್ರ್ಯದೀ ಸುಪ್ರಭಾತದಲ್ಲಿ?
ಹೆಜ್ಜೆ ಹೆಜ್ಜೆಯನಿಡಿಸಿ ಕೈ ಹಿಡಿದು ನಡೆಗಲಿಸಿ
ಬಿಡುಗಡೆಗೆ ತಂದ ಆ ತಂದೆಯೆಲ್ಲಿ?
ಎಲ್ಲಿ? ಓ ಅವನೆಲ್ಲಿ? ನಿಚ್ಚವೂ ನಮ್ಮೆದೆಯ
ನಂಜೀಂಟುವಾ ನೀಲಕಂಠನೆಲ್ಲಿ?
ಇಲ್ಲಿ ಉತ್ಸವದೊಳವನಿಲ್ಲ, ಆ ದೂರದಲಿ
ಕ್ರೋಧ ಕಾರ್ಪಣ್ಯ ರೋದನಗಳೊಡನೆ,
ಕೆನ್ನೀರು ಕಣ್ಣೀರುಗಳ ಹೊನಲಗೋಳ್ ನಡುವೆ
ದಾರಿದ್ರ್ಯ ದೈನ್ಯ ಧನಮದಗಳೊಡನೆ
ವಾದಿಸುತೆ ಬೋಧಿಸುತೆ ಕರುಣೆಯಿಂ ಸಾಧಿಸುತೆ
ಭಕ್ತಿಯಿಂ ದೇವನಂ ಪ್ರಾರ್ಥಿಸುತ್ತೆ
ನಿರಶನವ್ರತ ನಿಷ್ಠನಾಗಿಹನು ನೋಡಲ್ಲಿ
ಧರ್ಮಶಕ್ತಿಯ ಕೃಪೆಯನರ್ಥಿಸುತ್ತೆ!

-ಕುವೆಂಪು

ವಿಚಾರ ದೀಪ್ತಿ

"ನಮ್ಮದು ಅಹಿಂಸಾತ್ಮಕ ಸ್ವರಾಜ್ಯ. ಯಾರೂ ಯಾರಿಗೂ ಶತ್ರುವಾಗುವುದಿಲ್ಲ. ಸಾಮಾನ್ಯ ಗುರಿಗಾಗಿ ಪ್ರತಿಯೊಬ್ಬನೂ ತನ್ನ ಸೂಕ್ತ ಕೊಡುಗೆ ಕೊಡುತ್ತಾನೆ. ಓದು ಬರಹ ಬರುತ್ತದೆ. ಶ್ರಮಿಕನಿಗೆ ಉದ್ಯೋಗ ಸಿಗುತ್ತದೆ, ಯಾರೂ ದರಿದ್ರರಲ್ಲ. ಅಂತಹ ಸರಕಾರದಲ್ಲಿ ಜೂಜು, ಕುಡಿತ, ಅನೈತಿಕತೆ ಮತ್ತು 'ವರ್ಗದ್ವೇಷ'ವಿರುವುದಿಲ್ಲ. ಶ್ರೀಮಂತರು ತಮ್ಮ ಸಂಪತ್ತನ್ನು ಧರ್ಮದರ್ಶಿಗಳಂತೆ ನೋಡುತ್ತಾರೆ. ಅಹಿಂಸಾತ್ಮಕ ಸ್ವರಾಜ್ಯದಲ್ಲಿ ನ್ಯಾಯವಾದ ಹಕ್ಕುಗಳ ಉಲ್ಲಂಘನೆ ಇರುವುದಿಲ್ಲ; ಅನ್ಯಾಯದ ಹಕ್ಕುಗಳೂ ಇರುವುದಿಲ್ಲ. ಇಂತಹ ಸುಸಂಘಟಿತ ರಾಜ್ಯದಲ್ಲಿ ನಮ್ಮ ನಾಗರಿಕತೆಯ ಪ್ರತಿಭೆಗಳನ್ನು ಉಳಿಸಲು ನಾವು ಎಲ್ಲವನ್ನೂ ಹೊಸತಾಗಿ ಬರೆಯಬೇಕು, ಆದರೆ ಎಲ್ಲವನ್ನೂ 'ಭಾರತೀಯತೆ' ಯೆಂಬ ಸಂಸ್ಕೃತಿಯ ಹಾಳೆಯಲ್ಲಿ ಬರೆಯಬೇಕು. ನನ್ನ ದೃಷ್ಟಿಯಲ್ಲಿ ಸ್ವರಾಜ್ಯದ ಅರ್ಥ, ನಮ್ಮ ಅತ್ಯಂತ ಕನಿಷ್ಟ ವ್ಯಕ್ತಿಯ ಸ್ವಾತಂತ್ರ್ಯ. ಕೇವಲ ಬ್ರಿಟಿಷರ ನೊಗದಿಂದ ಭಾರತವನ್ನು ಬಿಡಿಸುವುದರಲ್ಲಿ ನನಗೆ ಆಸಕ್ತಿಯಿಲ್ಲ; ಯಾವುದೇ ನೊಗದಿಂದಲೂ ಭಾರತವನ್ನು ಬಿಡಿಸಬೇಕು. ಪೆದ್ದ ರಾಜನಿಗೆ ಬದಲಾಗಿ ದುಷ್ಟ ರಾಜ ಬರುವುದು ನಮಗೆ ಬೇಕಾಗಿಲ್ಲ. ಅಹಿಂಸೆಯ ಮೇಲೆ ನಿಂತ ಸ್ವರಾಜ್ಯದಲ್ಲಿ ಜನರು ತಮ್ಮ ಹಕ್ಕುಗಳನ್ನು ತಿಳಿಯಬೇಕಾಗಿಯೇ ಇಲ್ಲ. ಆದರೆ ತಮ್ಮ ಕರ್ತವ್ಯಗಳನ್ನು ತಿಳಿಯುವುದು ಅಗತ್ಯ. ಹಕ್ಕನು ಸೃಜಿಸದ ಕರ್ತವ್ಯವೆಂಬುದೇ ಇಲ್ಲ. ಅಂದರೆ ಕರ್ತವ್ಯ ಪಾಲನೆಯಿಂದ ಹೊರಹೊಮ್ಮುವುದಷ್ಟೇ ನಿಜವಾದ ಹಕ್ಕು. ಆದ್ದರಿಂದ ಯಾರು ತಾವಿರುವ ರಾಷ್ಟ್ರದ ಸೇವೆ ಮಾಡುತ್ತಾರೋ ಅವರಿಗೆ ಮಾತ್ರ ಪೌರತ್ವದ ಹಕ್ಕು ಬರುತ್ತದೆ. ಸತ್ಯ, ಅಹಿಂಸೆಗಳನ್ನು ಪಾಲಿಸುವ ವ್ಯಕ್ತಿಗೆ ಗೌರವ ಬರುತ್ತದೆ. ಯಾರು ಕರ್ತವ್ಯ ಪಾಲನೆಯಿಂದ ಹಕ್ಕುಗಳನ್ನು ಪಡೆಯುವರೋ ಅವರು ಆ ಹಕ್ಕುಗಳನ್ನು ಸಮಾಜಸೇವೆಗೆ ಮಾತ್ರ ಚಲಾಯಿಸಬಲ್ಲರು. ಎಂದೂ ತಮಗಾಗಿ ಅಲ್ಲ. ಜನತೆಯ ಸ್ವರಾಜ್ಯ ಎಂದರೆ ಅದು ವ್ಯಕ್ತಿಗಳ ಸ್ವರಾಜ್ಯದ ಒಟ್ಟು ಮೊತ್ತ. ಅಂತಹ ಸ್ವರಾಜ್ಯ ಬರುವುದು ವ್ಯಕ್ತಿಗಳು ತಮ್ಮ ಪೌರ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸಿದಾಗ ಮಾತ್ರ; ಕರ್ತವ್ಯಗಳನ್ನೇ ಮಾಡದೆ ಕೇವಲ ಹಕ್ಕುಗಳ ಬೆನ್ನು ಹತ್ತಿದರೆ ಅವುಗಳು ಮರೀಚಿಕೆಗಳಾಗುತ್ತವೆ.

–ಮಹಾತ್ಮಾಗಾಂಧೀ

ಶಿಥಿಲಗೊಳ್ಳುತ್ತಿರುವ ನಮ್ಮ ಸ್ವಾತಂತ್ರ್ಯ

-ಸುರೇಂದ್ರ ಕೌಲಗಿ

ಸ್ವಾತಂತ್ರ್ಯ, ನನ್ನ ಅರ್ಥದಲ್ಲಿ ನಮ್ಮಲ್ಲಿಯ ಅತ್ಯಂತ ವಿನಮ್ರ ಮತ್ತು ಕಡು ಬಡವನ ಸ್ವಾತಂತ್ರ್ಯ
-ಮಹಾತ್ಮಾ

ಬರುವ ಒಂದೊಂದು ಸ್ವಾತಂತ್ರ್ಯೋತ್ಸವ ನಮ್ಮ ಎದೆಯ ಭಾರವನ್ನು ಹೆಚ್ಚಿಸುತ್ತದೆ, ಮನದ ದುಗುಡವನ್ನು ತೀವ್ರಗೊಳಿಸುತ್ತದೆ. ನಮ್ಮ ಎದೆಯ ಮೇಲಿನ ಈ ಭಾರಕ್ಕೆ ಕಾರಣ ಒಂದೇ, ಎರಡೇ? ನೂರಾರು. ದೇಶದಲ್ಲಿ ಹಿಂಸೆ ಹೆಚ್ಚಿದೆ. ಧರ್ಮ, ಜಾತಿ ರಾಜಕಾರಣದ ನೆಪದಲ್ಲಿ ಹಿಂಸೆ ಆಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಹಿಂಸೆ ಇಡೀ ಸಮಾಜ ಜೀವನವನ್ನೇ ವ್ಯಾಪಿಸಿಕೊಳ್ಳುತ್ತಿದೆ. ಹೊರ ದೇಶಗಳೂ ನಮ್ಮನ್ನು ಹಿಂಸೆಗೆ ಎಳೆಯುತ್ತಿವೆ. ಹಿಂಸೆ ರಾಷ್ಟ್ರ ಜೀವನದ ಪ್ರಮುಖ ಸಮಸ್ಯೆಯಾಗಿದೆ. ಆದ್ದರಿಂದ ದೇಶದ ಒಟ್ಟು ಆದಾಯದಲ್ಲಿ ಬಹುದೊಡ್ಡ ಪಾಲು ಸೈನಿಕರನ್ನೂ, ಪೋಲಿಸರನ್ನೂ ಸಾಕಲು ಹಾಗೂ ಅವರ ಕೈಗೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಕೊಡಲೂ ವ್ಯಯವಾಗುತ್ತಿದೆ. ಶಸ್ತ್ರಾಸ್ತ್ರಗಳ ತಯಾರಿಕಾ ಕೈಗಾರಿಕೆ ದೊಡ್ಡದಾಗಿ ಬೆಳೆದಿದೆ. ದೇಶದ ಪ್ರಜೆಗಳ ಕೈಗೂ, ಸುಲಭವಾಗಿ ಸಿಗುವಷ್ಟರ ಮಟ್ಟಿಗೆ ಮಾರಕಾಸ್ತ್ರಗಳ ತಯಾರಿಕಾ ಘಟಕಗಳು ಕಾನೂನಿನ ಮರೆಯಲ್ಲಿ ಹುಟ್ಟಿಕೊಂಡಿವೆ. ಯಾವ ದೇಶದಲ್ಲಿ ಜನರು ಸ್ವತಃ ಹಿಂಸಾಚಾರಕ್ಕೆ ಇಳಿಯುತ್ತಾರೋ, ತನ್ಮೂಲಕ ರಾಜ್ಯಶಕ್ತಿಯ ಬಲವನ್ನು ದುರ್ಬಲಗೊಳಿಸುತ್ತಾರೋ ಹಾಗೂ ರಾಜ್ಯಶಕ್ತಿ ಮತ್ತು ಜನಶಕ್ತಿಗಳ ಮಧ್ಯ ಅಘೋಷಿತ ಕದನ ವರ್ಷವಿಡೀ ನಡೆಯುತ್ತಲೇ ಇರುತ್ತದೋ ಆ ದೇಶದಲ್ಲಿ ಶಾಂತಿಯೂ ಇರುವುದಿಲ್ಲ, ನೆಮ್ಮದಿಯೂ ಇರುವುದಿಲ್ಲ. ಆ ದೇಶದಲ್ಲಿ ನ್ಯಾಯಾಂಗ, ಕಾರ್ಯಾಂಗ ಮತ್ತು ಶಾಸಕಾಂಗಗಳು ಹಿಂಸಾಮಾರ್ಗಿಗಳ ಕೈಗೆ ಸಿಕ್ಕಿ ಆ ದೇಶದ ಸಂವಿಧಾನವು ನಿಷ್ಪ್ರಯೋಜಕವೆನಿಸುತ್ತದೆ. ಇಂಥ ದುರಂತ ಈಗ ನಮ್ಮ ದೇಶಕ್ಕೆ ಒದಗಿದೆಯೆಂಬುದರ ಅನುಭವ ದೇಶವಾಸಿಗಳಿಗಾಗುತ್ತಿದೆ. ಕಾಶ್ಮೀರದಿಂದ-ಕನ್ಯಾಕುಮಾರಿಯವರೆಗೆ, ಮುಂಬೈಯಿಂದ ಕಲ್ಕತ್ತದವರೆಗೆ ಹಿಂಸೆ ತಲೆಎತ್ತಿನಿಂತಿದೆ. ಪಾಕಿಸ್ತಾನ, ಬಾಂಗ್ಲಾದೇಶ ಮತ್ತು ಶ್ರೀಲಂಕೆಯ ಕಡೆಯಿಂದ ಭಯೋತ್ಪಾದಕರು ದೇಶದೊಳಕ್ಕೆ ನುಗ್ಗುತ್ತಿದ್ದಾರೆ. ನಕ್ಸಲೀಯರಂತೂ ದಿನಬೆಳಗಾದರೆ ಬೆಳೆಯುತ್ತಿದ್ದಾರೆ; ಮಾವೋ ಸಂಘಟನೆಗಳೂ ಬಲಗೊಳ್ಳುತ್ತಿವೆ. ೧೯೪೭ ನೇ ಇಸ್ವಿಯಿಂದಲೂ ದೇಶದಲ್ಲಿ ಹಿಂಸೆ ಬೆಳೆಯುತ್ತ ಬಂದಿದೆ. ಹಿಂಸೆಗೆ

ಕಾರಣವಾಗುತ್ತಿರುವ ಸಮಸ್ಯೆಗಳನ್ನು ನಿವಾರಿಸಲು ನಮ್ಮ ದೇಶದ ಸರ್ಕಾರಗಳು ವಿಫಲವಾಗುತ್ತಲೇ ಬಂದಿವೆ. ಸಮೀಪದ ಭವಿಷ್ಯದಲ್ಲಿ ಭಯೋತ್ಪಾದನೆ, ನಕ್ಸಲೀಯರ ಹಾವಳಿ, ಮತ್ತು ಇತರೆ ಪ್ರಕಾರದ ಹಿಂಸೆ ಕಡಿಮೆಯಾಗುವ ಯಾವ ಲಕ್ಷಣಗಳೂ ಗೋಚರಿಸುತ್ತಿಲ್ಲ. ಆದ್ದರಿಂದ ಸ್ವಾತಂತ್ರ್ಯೋತ್ಸವ ಎದೆಯ ಭಾರವನ್ನು ಹೆಚ್ಚಿಸುತ್ತಿದೆ.

ನಮ್ಮ ದೇಶದ ಸ್ವಾತಂತ್ರ್ಯ ಶಿಥಿಲಗೊಳ್ಳುತ್ತಿರುವುದಕ್ಕೆ ಪ್ರಧಾನ ಕಾರಣ ಈಗ ರಾಷ್ಟ್ರ ಮಟ್ಟದಲ್ಲಿಯೂ, ರಾಜ್ಯಗಳ ಮಟ್ಟದಲ್ಲಿಯೂ ನಡೆಯುತ್ತಿರುವ ರಾಜಕೀಯ ಘಟನೆಗಳು ಹಾಗೂ ರಾಜಕಾರಣದ ದಿಕ್ಸೂಚಿ. ಮೊದಲನೆಯದಾಗಿ ರಾಜಕೀಯ ಘಟನೆಗಳು ದೇಶದ ಸ್ವಾತಂತ್ರ್ಯದ ಮೇಲೆ ಕೊಡುವ ಏಟುಗಳಾಗಿವೆ. ಒಂದು ಚುನಾವಣೆ ನಡೆಯಿತೆಂದರೆ ಸ್ವಾತಂತ್ರ್ಯವೆಂಬ ಕಟ್ಟಡದ ಒಂದು ಕಲ್ಲು ಸಡಿಲವಾದಂತೆ. ಪ್ರತಿಯೊಂದು ಚುನಾವಣೆಯೂ –ಅದು ಗ್ರಾಮ ಪಂಚಾಯ್ತಿಯದಾಗಿರಬಹುದು, ಶಾಸನಸಭೆ, ಲೋಕಸಭೆಗಳಾಗಿರಬಹುದು ಸಮಾಜದ ಒಗ್ಗಟ್ಟಿನ ಒಂದೊಂದು ತಂತುವನ್ನೂ ಕತ್ತರಿಸುತ್ತದೆ; ಸಾಮಾಜಿಕ ಹಾಗೂ ನಾಗರಿಕ ಜೀವನದ ಒಂದೊಂದು ಮೌಲ್ಯವನ್ನೂ ಅಪಮೌಲ್ಯಗೊಳಿಸುತ್ತದೆ. ರಾಜಕಾರಣದಲ್ಲಿ ಅಪರಾಧೀಕರಣ, ಭ್ರಷ್ಟಾಚಾರ ಹೆಚ್ಚಿವೆ.

ನಮ್ಮ ದೇಶದಲ್ಲಿ ಸ್ವಾತಂತ್ರ್ಯ, ಪ್ರಜಾತಂತ್ರ, ಧರ್ಮ ನಿರಪೇಕ್ಷತೆ ಇವು ಪ್ರಧಾನವಾದ ಜೀವಸತ್ವಗಳಾಗಿವೆ. ಆದರೆ ಕಳೆದ ಅರವತ್ತು ವರ್ಷಗಳ ಸ್ವಾತಂತ್ರ್ಯ ಈ ಜೀವಸತ್ವಗಳನ್ನು ಕಲುಷಿತಗೊಳಿಸಿದೆ. ಪ್ರಜಾತಂತ್ರವೆಂದರೆ ಕರ್ತವ್ಯರಹಿತ ಹಕ್ಕುಗಳ ಚಲಾವಣೆ, ಧರ್ಮ ನಿರಪೇಕ್ಷತೆಯೆಂದರೆ ಧರ್ಮಗಳ ಓಲೈಸುವಿಕೆ ಎಂಬ ವ್ಯಾಖ್ಯೆಗಳು ಸೃಷ್ಟಿಗೊಂಡಿವೆ.

ಪ್ರತಿ ಸ್ವಾತಂತ್ರ್ಯೋತ್ಸವ ಸಮಯದಲ್ಲೂ ದೇಶದ ಅಭಿವೃದ್ಧಿ ಕುರಿತು ಮಾತನಾಡಲಾಗುತ್ತದೆ. ಈಗ ಸಾಧಿತವಾಗಿರುವ ಅಭಿವೃದ್ಧಿ ಸಾಲದು, ಇನ್ನೂ ಅಭಿವೃದ್ಧಿ ಬಹಳಷ್ಟು ಆಗಬೇಕಿದೆ ಮತ್ತು ಅಭಿವೃದ್ಧಿಯ ಗತಿಯೂ ತೀವ್ರಗೊಳ್ಳಬೇಕಿದೆ ಹಾಗೂ ಪ್ರಜೆಯ ವಾರ್ಷಿಕ ತಲಾ ಆದಾಯ ಬಹಳಷ್ಟು ಹೆಚ್ಚಬೇಕಾಗಿದೆ ಎಂಬೆಲ್ಲ ಮಾತುಗಳು ಕೇಳಬರುತ್ತವೆ. ಈ ಮಾತುಗಳು ವೇದಿಕೆಯ ಮೇಲೆ ಎಷ್ಟೇ ಗಂಭೀರವಾದುವೆಂದು ಅನಿಸಿದರೂ ಇವು ಭೂಮಿಯ ಮೇಲೆ ಪ್ರತ್ಯಕ್ಷ ಆಚರಣೆಗೆ ಬಂದಾಗ ಆಗುತ್ತಿರುವ ಪರಿಣಾಮಗಳೇ ಬೇರೆ. ಆ ಪರಿಣಾಮಗಳು ಹೆಚ್ಚಿನ ಸಂದರ್ಭದಲ್ಲಿ ಒಳ್ಳೆಯದಾಗಿರುವಬದಲು ಕೆಟ್ಟದುದಾಗಿರುತ್ತವೆ. ಉದಾಹರಣೆಗೆ ಅಭಿವೃದ್ಧಿಯನ್ನೇ ತೆಗೆದುಕೊಳ್ಳೋಣ ಅಭಿವೃದ್ಧಿಗಾಗಿ ಮೀಸಲಾಗಿರುವ ಮೊತ್ತದಲ್ಲಿ ಶೇಕಡಾ ಎಪ್ಪತ್ತೈದರಷ್ಟು ಹಣ ಭ್ರಷ್ಟಾಚಾರದ ಮೋರಿಯಲ್ಲಿ ಹರಿದುಹೋಗುತ್ತದೆ. ಅಭಿವೃದ್ಧಿ ಯೋಜನೆಗಳ ಸುತ್ತ ವಿವಿಧ ಹಿತಾಸಕ್ತಿಗಳ ಜೇಡರಬಲೆಯೇ ಹೆಣೆದಿರುತ್ತದೆ.

ಈ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳುವ ಪ್ರಾಣಿ, ಯಾರ ಹೆಸರಿನಲ್ಲಿ ಅಭಿವೃದ್ಧಿಯ ಇಡೀ ಪ್ರಕ್ರಿಯೆ ನಡೆಯುತ್ತದೋ ಆ ಸಾಮಾನ್ಯ ಪ್ರಜೆಯೆಂಬ ಪ್ರಾಣಿ ಈತನನ್ನು ಗೌರವಪೂರ್ಣವಾಗಿ ಶ್ರೀ ಸಾಮಾನ್ಯನೆಂದೂ ಕರೆಯುತ್ತೇವೆ. ಈ ಅಭಿವೃದ್ಧಿ ಯೋಜನೆಗಳು ದೇಶವನ್ನು ಕಟ್ಟುವುದರ ಬದಲಾಗಿ ದೇಶವನ್ನು ಮುರಿಯುತ್ತಿವೆ. ಚುನಾಯಿತ ಪ್ರತಿನಿಧಿಗಳ ಸ್ಥಾನವನ್ನು ಅಭಿವೃದ್ಧಿ ಕೆಲಸಮಾಡುವ ಗುತ್ತಿಗೆದಾರರು, ದೊಡ್ಡ-ದೊಡ್ಡ ಕೈಗಾರಿಕೋದ್ಯಮಿಗಳು, ಬಹುರಾಷ್ಟ್ರೀಯ ಕಂಪನಿಗಳು, ವಿದೇಶಿ ಶಕ್ತಿಗಳ ಗುಪ್ತಚಾರರು ಆಕ್ರಮಿಸಿಕೊಳ್ಳುತ್ತಿದ್ದಾರೆ. ಈ ಕಾರಣದಿಂದ ಪ್ರತಿಯೊಂದು ಸ್ವಾತಂತ್ರ್ಯೋತ್ಸವ ಎದೆಯ ಮೇಲಿನ ಭಾರವನ್ನು ಕಡಿಮೆ ಮಾಡುವುದರಬದಲು ಹೆಚ್ಚಿಸುತ್ತದೆ.

ದೇಶಕ್ಕೆ ಸ್ವಾತಂತ್ರ್ಯ ಬಂದು ಅರವತ್ತುವರ್ಷಗಳಾದರೂ ದೇಶವಾಸಿಗಳಿಗೆ ಇದುವರೆಗೂ ಸ್ವಾತಂತ್ರ್ಯದ ನಿಜವಾದ ಅರ್ಥಗೊತ್ತಾಗಿಲ್ಲವೆಂಬುದೂ ಮತ್ತು ಅದನ್ನು ಸರಿಯಾಗಿ ಅರ್ಥೈಸಿ ಹೇಳುವ ಪ್ರಯತ್ನವೂ ನಡೆದಿಲ್ಲವೆಂಬುದೂ ಅತ್ಯಂತ ಸೋಜಿಗದ ಹಾಗೂ ಅಪಾಯಕಾರಿ ಸಂಗತಿಯಾಗಿದೆ. ದೇಶದ ೧೧೦ ಕೋಟಿ ಜನರ ಹಿತದೃಷ್ಟಿಯಿಂದ, ಬೃಹತ್ ರಾಷ್ಟ್ರದ ಹಿತದೃಷ್ಟಿಯಿಂದ ಸ್ವಾತಂತ್ರ್ಯದ ವ್ಯಾಖ್ಯೆ ಸ್ಪಷ್ಟವಾಗಿ ಜನರ ಮುಂದೆ ಮಂಡಿತವಾಗಬೇಕಿದೆ. ಈ ವಿಷಯದಲ್ಲಿ ಮಹಾತ್ಮ ಗಾಂಧೀ ಸ್ಪಷ್ಟವಾದ ಮಾತನ್ನೇ ಆಡಿದ್ದಾರೆ. "ಸ್ವರಾಜ್ಯದ ವ್ಯಾಖ್ಯೆ ನನಗೆ ಗೊತ್ತಿಲ್ಲ. ಯಾರಾದರೂ ತಿಳಿಸಿದರೆ ಅವರನ್ನು ನನ್ನ ಗುರುವನ್ನಾಗಿ ಸ್ವೀಕರಿಸುವೆ." ಅಂದು ಗಾಂಧೀ ಕೊಟ್ಟ ಈ ಆಹ್ವಾನವನ್ನು ಇದುವರೆಗೂ ಯಾರೂ ಸ್ವೀಕರಿಸಿಲ್ಲ; ಸ್ವೀಕರಿಸುವ ಪರಿಸ್ಥಿತಿಯಲ್ಲೂ ಇಲ್ಲ, ಸಾಮರ್ಥ್ಯವೂ ಇಲ್ಲ. ಏಕೆಂದರೆ ದೇಶಕ್ಕೆ ಸ್ವಾತಂತ್ರ್ಯ ಬಂದಾಗಿನಿಂದಲೂ ಸಮುದಾಯದ ನಾಯಕರೆಲ್ಲರೂ ದೇಶದ ಖಜಾನೆಯನ್ನು ಖಾಲಿ ಮಾಡುವುದರಲ್ಲಿ ನಿರತರಾದರೇ ಹೊರತು ಸ್ವಾಭಿಮಾನದಿಂದ ಕೂಡಿದ ರಾಷ್ಟ್ರ ಕಟ್ಟುವ ದಿಕ್ಕನ್ನೇ ತೋರಿಸಲಿಲ್ಲ. ದೇಶದ ೧೧೦ ಕೋಟಿ ಜನರನ್ನೂ ರಾಜಕೀಯ ಸತ್ತೆಯ ಅಡಿಯಾಳನ್ನಾಗಿ ಮಾಡಿದರು. ಇಂಥ ಸ್ವಾರ್ಥಪೂರ್ಣ ಜನನಾಯಕರಿಂದ "ಸ್ವರಾಜ್ಯ"ದಂಥ ರಾಜ್ಯವ್ಯವಸ್ಥೆಯ ವ್ಯಾಖ್ಯೆ ಹೊರಹೊಮ್ಮಲು ಹೇಗೆ ತಾನೆ ಸಾಧ್ಯ? ಸ್ವರಾಜ್ಯಕ್ಕಾಗಿ ಹೋರಾಡಿದ ವ್ಯಕ್ತಿಗೆ ಸ್ವರಾಜ್ಯದ ಪೂರ್ಣರೂಪದ ವ್ಯಾಖ್ಯೆ ತಮಗೆ ಗೊತ್ತಿಲ್ಲವೆಂದು ಹೇಳಿದ ಮೇಲೆ ಅಧಿಕಾರದಾಹಿ ರಾಜಕಾರಣಗಳಿಂದ ಹೇಳಲು ಹೇಗೆ ಸಾಧ್ಯ? ಒಂದು ವೇಳೆ ಸ್ವರಾಜ್ಯ ಅಥವಾ ಸ್ವಾತಂತ್ರ್ಯದ ವ್ಯಾಖ್ಯೆ ಪ್ರಕಟಗೊಂಡಿದ್ದರೆ ಅದು ವಿಶ್ವವಿದ್ಯಾನಿಲಯಗಳ ರಾಜ್ಯಶಾಸ್ತ್ರ ವಿಭಾಗಗಳಲ್ಲಿ, ಸಾವಿರಾರು ರೂಪಾಯಿಗಳ ಸಂಬಳ ತೆಗೆದುಕೊಳ್ಳುವ ರಾಜ್ಯಶಾಸ್ತ್ರದ ಪ್ರೊಫೆಸರರಿಂದ ತಮ್ಮ ಮುಂದೆ

ಕುಳಿತ ಕೆಲವೇ ಕೆಲವು ರಾಜ್ಯಶಾಸ್ತ್ರಗಳ ವಿದ್ಯಾರ್ಥಿಗಳ ಮುಂದೆ. ಗಾಂಧೀ ತಮಗೆ ಸ್ವರಾಜ್ಯದ ವ್ಯಾಖ್ಯೆ ಗೊತ್ತಿಲ್ಲವೆಂದು ಹೇಳಿದ್ದರೂ ಇನ್ನೊಂದು ಸಂದರ್ಭದಲ್ಲಿ "ನನ್ನ ಪ್ರಜಾತಂತ್ರವೆಂದರೆ ಪ್ರತಿಯೊಬ್ಬನೂ ತನ್ನ ಒಡೆಯ ತಾನೇ" ಎಂದು ಹೇಳಿದ್ದಾರೆ. ಗಾಂಧೀಜಿಯವರ ಈ ಹೇಳಿಕೆಯನ್ನು ಗಮನಿಸಿದಾಗ ಈಗ ನಮ್ಮ ದೇಶದಲ್ಲಿಯ ನಾಗರಿಕನು ಅನುಭವಿಸುತ್ತಿರುವ ವಿವಿಧ ಪ್ರಕಾರದ ಪಾರತಂತ್ರ್ಯಗಳು ಗೋಚರಿಸುತ್ತವೆ. ದೇಶದ ಪ್ರಜೆಯನ್ನು ಬಂಧಿಸಿದ ಪಾರತಂತ್ರ್ಯದ ಹಗ್ಗ ಎಷ್ಟು ಉದ್ದವಿದೆಯೆಂದರೆ ಅದನ್ನು ಕತ್ತರಿಸಲು ಇನ್ನೊಬ್ಬ ಗಾಂಧೀ, ಇನ್ನೊಬ್ಬ ಅಂಬೇಡ್ಕರ್, ಇನ್ನೊಬ್ಬ ವಿನೋಬಾ, ಇನ್ನೊಬ್ಬ ಜೆ.ಪಿ ಹುಟ್ಟಿಬರಬೇಕಾಗಿದೆ. ಸ್ವತಂತ್ರ ದೇಶವೆಂದೂ ಗಣರಾಜ್ಯವೆಂದೂ ಕರೆಯಲ್ಪಡುವ ಭಾರತದ ಪ್ರಜೆ ಸ್ವಂತ ಸಾಲಗಳಿಂದಲೂ, ದೇಶದ ಸರ್ಕಾರಗಳೂ, ಗ್ರಾಮ ಪಂಚಾಯ್ತಿಗಳೂ ಮಾಡಿಕೊಂಡಿರುವ ಸಾಲದ ಹಗ್ಗದಿಂದಲೂ ನೇಣು ಹಾಕಿಕೊಳ್ಳುತ್ತಿದ್ದಾನೆ. ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಗಣರಾಜ್ಯದ ಘೋಷಣೆಯ ಪೂರ್ವದಲ್ಲಿ ಬಹಳಷ್ಟು ಬಗೆಯಲ್ಲಿ ಗಣರಾಜ್ಯವಾಗಿದ್ದ ಗ್ರಾಮಗಳು ಇಂದು ಜಾಗತೀಕರಣ ಮತ್ತು ದೇಶದ ಕೇಂದ್ರಿಕೃತ ಅಭಿವೃದ್ಧಿ ಯೋಜನೆಗಳು ಮತ್ತು ಕೇಂದ್ರೀಕೃತ ಆರ್ಥಿಕ ಮತ್ತು ಪ್ರಾಧಿಕಾರಕ ಕಾರಣಗಳಿಂದಾಗಿ ನಾಮಾವಶೇಷಗಳಾಗುತ್ತಿವೆ. ಬಾಹ್ಯಾಕಾಶಕ್ಕೆ ಹೋಗಿಬರುವ ಗಗನಯಾತ್ರಿಗಳಿಗೆ ಭಾರತ ಒಂದು ಸರ್ವತಂತ್ರ ಸ್ವತಂತ್ರ ಜಾತ್ಯಾತೀತ ಸಮಾಜವಾದಿ ದೇಶವೆಂದು ಕಾಣಬಹುದೇ ಹೊರತು ಭರತ ಭೂಮಿಯ ಮೇಲೆ ಇರುವ ಪ್ರಜೆ ನಾನಾಬಗೆಯ ಸಂಕೋಲೆಗಳಿಂದ ಬಂಧಿತನಾಗಿದ್ದಾನೆ.

೧೯೪೭ರ ಮಧ್ಯ ರಾತ್ರಿಯಲ್ಲಿ ಜವಾಹರಲಾಲ್ ನೆಹರೂ ಪ್ರಜಾಪ್ರತಿನಿಧಿ ಸಭೆಯಲಿ ಮಾಡಿದ್ದ ಆ ಐತಿಹಾಸಿಕ ಭಾಷಣದಲ್ಲಿಯ ಯಾವೊಂದು ಮಾತೂ ಸಾಕಾರಗೊಂಡಿಲ್ಲ. ರಾಷ್ಟ್ರಕವಿ ರವೀಂದ್ರನಾಥ್ ಟಾಗೋರರು ಎಂಥ ಭಾರತ ಕುರಿತಾದ ಕನಸನ್ನು ಹಾಡಿದ್ದರೋ ಆ ಕನಸು ನನಸಾಗಿಲ್ಲ. ಈ ಎಲ್ಲ ವಾಸ್ತವಿಕ ಸಂಗತಿಗಳು ಭಾರತದ ಸ್ವಾತಂತ್ರ್ಯವನ್ನು ಶಿಥಿಲಗೊಳಿಸುತ್ತಿವೆ ಮತ್ತು ಎದೆಯ ಭಾರವನ್ನು ಹೆಚ್ಚಿಸುತ್ತಿವೆ.

ದೇಶದ ಸ್ವಾತಂತ್ರ್ಯ ದುರ್ಬಲಗೊಳ್ಳುತ್ತಿರುವುದಕ್ಕೆ ಸಮ್ಮಿಶ್ರ ಸರ್ಕಾರದ ರಚನೆಯ ಯುಗ ಪ್ರಾರಂಭವಾದುದ್ದು. ಈಗ ಕೇಂದ್ರ ಮತ್ತು ರಾಜ್ಯಗಳಲ್ಲಿರುವ ಸಮ್ಮಿಶ್ರ ಸರ್ಕಾರಗಳ ಕಾರ್ಯವೈಖರಿ ಹೇಗೆ ಇದೆಯೆಂದರೆ ಜಿಂಕೆಯ ಬೇಟೆಗೆ ಹೊಂಚು ಹಾಕಿ ಕುಳಿತಿರುವ ವ್ಯಾಘ್ರನಂತಿದೆ. ಆ ಸರ್ಕಾರಗಳಿಗೆ ಜನತೆಯ ಹಿತ ಬೇಕಾಗಿಲ್ಲ. ಬೇಕಾಗಿರುವುದು ಅಧಿಕಾರ ಸೂತ್ರ. ಸಮ್ಮಿಶ್ರ ಸರ್ಕಾರದ ವ್ಯಾಖ್ಯೆಯೇನೆಂದರೆ "ಬೇಕಾದಾಗ ಜವಾಬ್ದಾರಿ, ಬೇಡವಾದಾಗ ಬೇಜವಾಬ್ದಾರಿ".

ಸಮ್ಮಿಶ್ರ ಸರ್ಕಾರದಲ್ಲಿ ಪಾಲ್ಗೊಂಡಿರುವ ಒಂದೊಂದು ಪಕ್ಷವೂ ಸರ್ಕಾರವನ್ನು ಒಂದೊಂದು ದಿಕ್ಕಿಗೆ ಎಳೆಯುತ್ತದೆ. ಇದರ ಪರಿಣಾಮ ಸರ್ಕಾರವೆಂಬ ಸಂಸ್ಥೆಯ ಶ್ಯೂನೀಕರಣ. ನಮ್ಮ ದೇಶವನ್ನು ಇಂಗ್ಲೀಷರು ಆಳಿತ್ತಿರ್ದ್ದಾಗ ಅವರ ಸರ್ಕಾರವು ಭಾರತೀಯರ ದೃಷ್ಟಿಯಿಂದ ಶೂನ್ಯಾವಸ್ಥೆಯನ್ನೇ ತಲುಪಿತ್ತು. ಆಗ ಇಂಗ್ಲೀಷ್ ಸರ್ಕಾರ ಏನು ಮಾಡುತ್ತಿತ್ತೋ ಅದನ್ನೇ ಇಂದು ಸ್ವತಂತ್ರ ಭಾರತದ ಸರ್ಕಾರ ಮಾಡುತ್ತಿದೆ. ಇಂಗ್ಲೀಷ ಸರ್ಕಾರ ಉಪ್ಪಿನ ಮೇಲೆ ಹೇರದ್ದ ತೆರಿಗೆಯನ್ನು ಪ್ರತಿಭಟಿಸಿದ ಗಾಂಧೀಜಿ, ಸ್ವತಂತ್ರಭಾರತದಲ್ಲಿ ಪ್ರತಿಯೊಬ್ಬರಿಗೂ ಉಪ್ಪು ಉಚಿತವಾಗಿ ದೊರೆಯುವಂತ್ತಾಗಬೇಕು ಎಂದಿದ್ದರು. ಆದರೆ ಇಂದು ಉಪ್ಪು ಹೆಚ್ಚಿನ ತೆರಿಗೆಯ ಭಾರದಿಂದ ಜನಸಾಮಾನ್ಯರಿಗೆ ಒಂದು ದುಬಾರಿ ಪದಾರ್ಥವಾಗಿ ಪರಿಣಮಿಸಿದೆ. ಈ ವಿಷಯವನ್ನು ಮಹಾತ್ಮ ಗಾಂಧೀಯವರ ಮಾತುಗಳಲ್ಲಿಯೇ ತಿಳಿದುಕೊಳ್ಳುವುದು ಸೂಕ್ತ. ಈ ಕೆಳಗೆ ಕಾಣಿಸಿದ ಮಾತುಗಳನ್ನು ಗಾಂಧೀ ೨೭ ಅಕ್ಟೋಬರ್ ೧೯೨೦ ರಲ್ಲಿ ಇಂಗ್ಲೀಷ್ ಸರ್ಕಾರಕ್ಕೆ ಹೇಳಿದ್ದರು. ಅಂದರೆ ಇಂದಿಗೆ ೮೬ ವರ್ಷಗಳ ಹಿಂದೆ ಹಾಗೂ ಸ್ವಾತಂತ್ರ್ಯ ಬರುವುದಕ್ಕೆ ಇಪ್ಪತ್ತೇಳು ವರ್ಷಗಳ ಮೊದಲು ಗಾಂಧೀಯವರ ಆ ಮಾತುಗಳು ಇಂದಿಗೂ ಅನ್ವಯಿಸುತ್ತವೆಂಬುದೇ ಗಮನಿಸಬೇಕಾದ ಸಂಗತಿ.

೧) ಭಾರತದ ಸಂಪನ್ಮೂಲಗಳನ್ನು ಗ್ರೇಟ್‌ಬ್ರಿಟನ್ನಿನ ಲಾಭಕ್ಕಾಗಿ ಲೂಟಿ ಮಾಡಲಾಗುತ್ತಿದೆ. (ಈಗ ಇಲ್ಲಿ ಗ್ರೇಟ್‌ಬ್ರಿಟನ್ ಸ್ಥಾನದಲ್ಲಿ ಬಹುರಾಷ್ಟ್ರೀಯ ಹಾಗೂ ದೇಶಿ ಬಂಡವಾಳಶಾಹಿ ಕಂಪನಿಗಳನ್ನು ಇರಿಸಬೇಕು).

೨) ಸದಾ ಹೆಚ್ಚಾಗುತ್ತಿರುವ ಮಿಲಿಟರಿ ಖರ್ಚು ಮತ್ತು ವಿಶ್ವದಲ್ಲಿಯೇ ಅತ್ಯಂತ ದುಬಾರಿಯಾದ ನೌಕರಶಾಹಿ.

೩) ಬೆಳೆಯುತ್ತಿರುವ ಹಿಂಸಾಚಾರವನ್ನು ಅಹಿಂಸಾವಾಗಿ ಎದುರಿಸಬೇಕಾದ ಎದೆಗಾರಿಕೆಯಲ್ಲಿ ಪ್ರಜೆಗಳನ್ನು ತರಬೇತಿಗೊಳಸದೆ ಅವರನ್ನು ಷಂಡರನ್ನಾಗಿ ಮಾಡಿರುವುದು.(ಇಲ್ಲಿ ಗಾಂಧೀಜಿಯವರ ಮಾತುಗಳನ್ನು ಇಂದಿನ ಸಂದರ್ಭಕ್ಕೆ ಅನುಗುಣವಾಗಿ ಭಾವ್ಯೆಸಲಾಗಿದೆ).

೪) ದೇಶದ ಆತ್ಮದನೋವಿನ ಅಳಲನ್ನು ಪ್ರದರ್ಶಿಸಲು ಕೈಗೊಳ್ಳಲಾಗುವ ಚಳುವಳಿಗಳ ದಮನಕ್ಕಾಗಿ ಕಠೋರ ಶಾಸನಗಳ ಜಾರಿಯಾಗುತ್ತಿದೆ.

೫) ದೇಶದ ಬಡತನವನ್ನು ಗಣನೆಗೆ ತೆಗೆದುಕೊಳ್ಳದೆಯೇ ಪ್ರತಿಯೊಂದು ಇಲಾಖೆಯಲ್ಲಿ ನಡೆಯುತ್ತಿರುವ ದುಂದುಗಾರಿಕೆ.

೬) ಸೇಂದಿ, ವಿಸ್ಕಿಯಂಥ ಮದ್ಯಗಳ ಬಳಕೆಗೆ ಸಾರಾಸಗಟು ಅವಕಾಶ ಕೊಟ್ಟ ಬಹು ದುಬಾರಿಯಾದ ಆಡಳಿತಯಂತ್ರವನ್ನು ನಡೆಸುತ್ತಿರುವುದು.

ಎಂಟು ದಶಕಗಳ ಹಿಂದೆ ಗಾಂಧೀಜಿ ಹೇಳಿದ್ದ ಈ ಮಾತುಗಳು ಇಂದಿನ ಸರ್ಕಾರದ ನೀತಿಗೆ ಹೋಲುವುದಿಲ್ಲವೆಂದು ಯಾರು ತಾನೆ ಹೇಳಲು ಸಾಧ್ಯ?

ಸ್ವಾತಂತ್ರ್ಯ ಶಿಥಿಲಗೊಳ್ಳುತ್ತಿರುವುದಕ್ಕೆ ಇನ್ನೊಂದು ಬಹು ಪ್ರಮುಖ ಕಾರಣ ಮಿತಿಯಿಲ್ಲದೆ ಬೆಳೆಯುತ್ತಿರುವ ಜನಸಂಖ್ಯೆ. ಜನಸಂಖ್ಯೆ ಎಷ್ಟು ತೀವ್ರಗತಿಯಿಂದ ಬೆಳೆಯುತ್ತಿದೆಯೆಂದರೆ ಈಗ ಅದನ್ನು "ಆಸ್ಫೋಟನೆಯೆಂದೇ ಕರೆಯಲಾಗುತ್ತಿದೆ. ಈಗಿನ ಜನಸಂಖ್ಯಾ ಆಸ್ಫೋಟನೆ ಅಂದಿನ ಅಣುಬಾಂಬ್ ಆಸ್ಫೋಟನೆ ಪರಿಣಾಮದಲ್ಲಿ ಒಂದೇ ಆಗಿವೆ. ನಿಯಂತ್ರಣವಿಲ್ಲದೆ ಬೆಳೆಯುತ್ತಿರುವ ಜನಸಂಖ್ಯೆ ಅನೇಕ ಪ್ರಕಾರದ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಆರೋಗ್ಯದಸಮಸ್ಯೆಗಳನ್ನು ಉಂಟು ಮಾಡಿದೆ. ಮುಖ್ಯವಾದ ಪರಿಣಾಮ ನಗರಗಳು ಮಿತಿಮೀರಿ ಬೆಳೆಯುತ್ತಿರುವುದು ಹಾಗೂ ಹಳ್ಳಿಗರ ನಗರ ವಲಸೆ, ಇತ್ತೀಚೆಗೆ ಹಳ್ಳಿಗಳು ನಗರಗಳ ವಸಹಾತುಗಳಾಗಿ ಪರಿಣಮಿಸಿವೆ. ಅವು ನಗರಗಳಿಗೆ ಬೇಕಾಗುವ ಮಾನವಶಕ್ತಿ ಆದಿಯಾಗಿ ಎಲ್ಲ ಪ್ರಕಾರದ ಕಚ್ಚಾ ಪದಾರ್ಥಗಳನ್ನು ಉತ್ಪಾದಿಸಿ ನಗರಗಳಿಗೆ ರಫ್ತು ಮಾಡುವ ತಾಣಗಳಾಗಿವೆ. ಬರಬರುತ್ತಾ ಭಾರತ ಹಳ್ಳಿಗಳ ದೇಶದಿಂದ ನಗರಗಳ ದೇಶವೆಂದು ರೋಪಾಂತರಗೊಳ್ಳುತ್ತಿದೆ. ನಗರಗಳು ಕ್ರಮೇಣ ಪಾಶ್ಚಾತ್ಯ ಸಂಸ್ಕೃತಿಗೆ ಮೋಹಿತವಾಗುತ್ತಿವೆ. ಇದರಿಂದಾಗಿ ಭಾರತೀಯರ ಜೀವನಶೈಲಿ ಆಧ್ಯಾತ್ಮಿಕತೆಯಿಂದ ಭೌತಿಕತೆಯ ಕಡೆಗೆ ಭರದಿಂದ ವಾಲುತ್ತಿದೆ. ಇದರ ಮುಖ್ಯ ದುಷ್ಪರಿಣಾಮ ಪರಿಸರದ ಮೇಲೆ ಉಂಟಾಗುತ್ತಿದೆ. ಕಾಡು ಕ್ಷಯಿಸುತ್ತಿದೆ, ಖನಿಜ ಕರಗುತ್ತಿದೆ, ವಾಯು ವಿಷವಾಗುತ್ತಿದೆ, ನೀರು ಮಲಿನವಾಗುತ್ತಿದೆ, ಲೈಂಗಿಕ ರೋಗಗಳು ದಾಳಿಯಿಕ್ಕುತ್ತಿವೆ, ಶಿಕ್ಷಣ ದುಬಾರಿಯೂ, ಶೋಷಣೆಗೆ ಸಾಧನವೂ ಆಗುತ್ತಿದೆ, ಹಣ ಸಮಾಜವನ್ನೂ ಬೆತ್ತಲೆ ಮಾಡಿದೆ. ಹಾಲಾಹಲದ ಹೊಳೆ ಹರಿಯುತ್ತಿದೆ.

ದೇಶದ ಸ್ವಾತಂತ್ರ್ಯ ಎದೆಯ ಭಾರವನ್ನು ಹೆಚ್ಚಿಸುವುದಕ್ಕೆ ಇವಿಷ್ಟು ಕಾರಣಗಳು ಸಾಲವೆ? ಸ್ವಾತಂತ್ರ್ಯ ಶಿಥಿಲಗೊಳ್ಳುವುದಕ್ಕೆ ಹೊಡೆತ ಸಾಲದೆ?. ಒಳ್ಳೆಯ ನಾಯಕತ್ವ ಪುನಃ ಕಾಣಿಸಿಕೊಳ್ಳುವವರೆಗೆ ದೇಶ ಅವನತಿಯತ್ತಲೇ ವಾಲುತ್ತಸಾಗುವುದು. ಪದಾರ್ಥಗಳನ್ನು ಕೈಗಾರಿಕೆಗಳಲ್ಲಿ ತಯಾರಿಸಬಹುದು, ಹಣವನ್ನು ಟಂಕಿಸಬಹುದು, ಭವ್ಯ ಸೌಧಗಳನ್ನು ನಿರ್ಮಿಸಬಹುದು, ಮಂದಿರ-ಮಸೀದಿ-ಚರ್ಚ್ ಕಟ್ಟಬಹುದು. ಆದರೆ ಭಾರತದಂಥ ವಿಶಿಷ್ಟ ದೇಶಕ್ಕೆ ಬೇಕಾಗಿರುವ ವಿಶಿಷ್ಟ ನಾಯಕರನ್ನು ಸೃಷ್ಟಿಸುವ ಬಗೆ ಹೇಗೆ? ಇದೇ ಇಂದಿನ ಅತ್ಯಂತ ಜ್ವಲಂತ ಪ್ರಶ್ನೆಯಾಗಿದೆ.

***

ದಲಿತ ಚಳುವಳಿಯ ಜನಕ ಕುದ್ಮುಲ್ ರಂಗರಾವ್

-ಮುಗಳವಳ್ಳಿ ಕೇಶವ ಧರಣಿ

ಭಾರತದ ಸಾಮಾಜಿಕ ವ್ಯವಸ್ಥೆಯ ಜಾತೀಯತೆ, ಅಸ್ಪೃಶ್ಯತೆ, ವರ್ಣಭೇದ ಮೊದಲಾದ ಅನಿಷ್ಟ ಪಿಡುಗುಗಳ ಜತೆ ಸವರ್ಣೀಯರ ದಬ್ಬಾಳಿಕೆ, ದೌರ್ಜನ್ಯಗಳು ಮೇರೆ ಮೀರಿದ ಸಂಭರ್ಭದಲ್ಲಿ ದಕ್ಷಿಣ ಭಾರತದಲ್ಲಿ ಆರಂಭವಾದ ಸಾಮಾಜಿಕ ಸುಧಾರಣಾ ಚಳುವಳಿಯ ನಾಯಕತ್ವವನ್ನು ಮಹಾತ್ಮ ಜ್ಯೋತಿಬಾಫುಲೆ, ಶಾಹು ಮಹರಾಜ್, ನಾರಾಯಣ ಗುರು, ನಾಲ್ವಡಿ ಕೃಷ್ಣರಾಜ ಒಡೆಯರು ಮೊದಲಾದವರು ವಹಿಸಿದ್ದರು. ಇವರಿಗೆ ದಲಿತ ಜನರ ವಿಕಾಸಕ್ಕೆ ಶ್ರಮಿಸಲು ಪ್ರೇರಣೆ ನೀಡಿದ ಹಾಗೂ ಮಹಾತ್ಮ ಗಾಂಧೀಜಿಯವರ ಅಸ್ಪೃಶ್ಯತಾ ನಿವಾರಣಾ ಆಂದೋಲನಕ್ಕೆ ಸ್ಫೂರ್ತಿ, ಪ್ರೇರಣೆ, ಮಾರ್ಗದರ್ಶಕರಾದವರು, ದಕ್ಷಣ ಕನ್ನಡ ಜಿಲ್ಲೆಯ ಶೋಷಿತ ಜನಾಂಗದ ಬಾಳಿನಲ್ಲಿ ನೈತಿಕ ಧೈರ್ಯದ ನಂದಾದೀಪ ಹಚ್ಚಿದವರು ಕುದ್ಮುಲ್ ರಂಗರಾವ್ ಅವರು.

ಇಂದಿಗೆ ನೂರು ವರ್ಷಗಳ ಹಿಂದೆಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಸ್ಪೃಶ್ಯರಲ್ಲಿ ಅರಿವು ಮೂಡಿಸಿ ಅವರ ಹಸಿವು ನೀಗಿಸಲು ಅವರ ಮಕ್ಕಳಿಗಾಗಿ ಜಿಲ್ಲೆಯಲ್ಲಿ ಹತ್ತಾರು ಕಡೆ ಶಾಲೆಗಳನ್ನು ತೆರೆದು ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಿ ಶಿಕ್ಷಣ ನೀಡುವ ವ್ಯವಸ್ಥೆ ಕಲ್ಪಿಸಿದರು. ವಿಧವೆಯರು ಮತ್ತು ದೇವದಾಸಿಯರ ಕಲ್ಯಾಣಕ್ಕಾಗಿ ಆಶ್ರಮಗಳನ್ನು ನಿರ್ಮಿಸಿ, ಶ್ರೀಮಂತರಿಂದ ನೂರಾರು ಎಕರೆ ಜಮೀನನ್ನು ಕ್ರಯಕ್ಕೆ ಕೊಂಡು ದಲಿತರ ಕೃಷಿ ಮತ್ತು ವಸತಿಗೆ ನಿವೇಶನಗಳನ್ನು ಉಚಿತವಾಗಿ ಹಂಚಿ ದಲಿತರ ಆಶಾಕಿರಣವಾಗಿ, ಸಂಪ್ರದಾಯಶರಣರಿಗೆ ಸಿಡಿಲಾಗಿ ಕುದ್ಮುಲ್ ರಂಗರಾಯರು ಹೋರಾಡಿದರು.

ದಕ್ಷಿಣ ಕನ್ನಡ ಜಿಲ್ಲೆಯೊಂದಿಗೆ ಒಂದಾಗಿದ್ದ ಕಾಸರಗೂಡಿನ ಕುದ್ಮುಲ್ ಎಂಬ ಚಿಕ್ಕ ಗ್ರಾಮದಲ್ಲಿ ಪ್ರತಿಷ್ಠಿತ ಸಾರಸತ್ವ ಬ್ರಾಹ್ಮಣ ಕುಟುಂಬದಲ್ಲಿ ೧೮೫೯ ಜೂನ್ ೨೯ ರಂದು ದೇವಪ್ಪಯ್ಯ ಮತ್ತು ಶ್ರೀಮತಿ ಗೌರಿ ದಂಪತಿಗಳ ಮಗನಾಗಿ ರಂಗರಾವ್ ಜನಿಸಿದರು. ಶಿಕ್ಷಣ ಮುಗಿಸಿ ವಕೀಲ ವೃತ್ತಿಯಲ್ಲಿ ತೊಡಗಿದ್ದ ರಂಗರಾಯರು ಬಡವರ ಬಂಧು. ಬಡವರ ವಕೀಲರೆಂದೇ ಪ್ರಸಿದ್ಧರಾದರು. ಒಮ್ಮೆ ಸವರ್ಣೀಯನೊಬ್ಬನ ಬಲಾತ್ಕಾರದಿಂದ ಗರ್ಭಿಣಿಯಾಗಿದ್ದ ದಲಿತ ಯುವತಿಯ ಬಗ್ಗೆ ತಿಳಿದ ಕುದ್ಮುಲರು ದಲಿತ ಯುವತಿಯ ಪರವಾಗಿ ದಾವೆ

ಹೂಡಿ ಸವರ್ಣೀಯನಿಗೆ ನ್ಯಾಯಾಲಯದಿಂದ ಜೈಲು ಶಿಕ್ಷೆ ಕೊಡಿಸಿ ದಲಿತ ಯುವತಿಗೆ ಜೀವನಾಂಶ ಕೊಡಿಸಿದರು.

ಬ್ರಾಹ್ಮಣ ತರುಣಿಯಲ್ಲಿ ಅನುರಕ್ತನಾದ ಶೂದ್ರನನ್ನು ಮರಣದಂಡನೆಗೆ ಗುರಿ ಮಾಡುವ, ಶೂದ್ರ ತರುಣಿಯನ್ನು ಮೋಹಿಸಿದ ಬ್ರಾಹ್ಮಣನಿಗೆ ಶುದ್ಧಿಯ ಮೂಲಕ ಕ್ಷಮಿಸುವ ಮತ್ತು ಶೂದ್ರನನ್ನು ಕೊಂದ ಉತ್ತಮ ಕುಲದವರಿಗೆ ಶಿಕ್ಷೆಯಿಲ್ಲ; ಉತ್ತಮ ಕುಲದವರನ್ನು ಕೊಂದ ಶೂದ್ರರಿಗೆ ಮರಣ ದಂಡನೆಯೇ ಕನಿಷ್ಠ ಶಿಕ್ಷೆ ಎಂಬಂಥ ಕಟ್ಟಳೆಗಳು ಜಾರಿಯಲ್ಲಿದ್ದ ದಿನಗಳಲ್ಲಿ ರಂಗರಾಯರು ಸವರ್ಣೀಯರ ಕರ್ಣಕಠೋರ ನಿಂದೆ, ಅಪಮಾನಗಳಿಗೆ ಬಲಿಯಾದರು, ಇದರಿಂದಾಗಿ ರಂಗರಾಯರು ಕೆಲವರಿಗೆ ಅಪ್ರಿಯರಾಗಿ ಕಂಡುಬಂದರೂ ಬಡವರು ಮತ್ತು ದಲಿತರಿಗೆ ಅತೀ ಪ್ರಿಯರಾಗಿ, ದನಿ ಇಲ್ಲದವರಿಗೆ ದನಿ ಕೊಟ್ಟು ಅವರಲ್ಲಿ ಆತ್ಮಸ್ಥೈರ್ಯ ತುಂಬಿದ ಆಶಾಕಿರಣವಾದರು.

೧೮೮೮ ರಲ್ಲಿ ಮಂಗಳೂರು ಜಿಲ್ಲಾ ಕೋರ್ಟಿನಲ್ಲಿ ನಡೆದ ಅನಿರೀಕ್ಷಿತ ಘಟನೆ ರಂಗರಾಯರ ಜೀವನದ ಹೊಸ ತಿರುವು ಸೃಷ್ಟಿಸಿತು. ಬೆಂದೂರು ಬಾಬು ಎನ್ನುವ ಅಸ್ಪೃಶ್ಯ ವ್ಯಕ್ತಿ ಕೋರ್ಟಿನಲ್ಲಿ ಪೇದೆ ಕೆಲಸಕ್ಕಾಗಿ ಅರ್ಜಿ ಹಾಕಿದ್ದು ಮತ್ತು ಆತನನ್ನು ಆಗಿನ ಆಂಗ್ಲ ನ್ಯಾಯಾಧೀಶ ನೇಮಕ ಮಾಡಿದರು. ಈ ವಿಷಯ ತಿಳಿದ ಸವರ್ಣೀಯರು ಒಟ್ಟಾಗಿ ಪ್ರತಿಭಟಿಸಿದರು. ನ್ಯಾಯಾಧೀಶರಿಗೆ ಕೊಲೆ ಬೆದರಿಕೆ ಹಾಕಿದರು. ನ್ಯಾಯಾಲಯವನ್ನು ಬಹಿಷ್ಕರಿಸಿದರು. ಇದನ್ನೆಲ್ಲ ಗಮನಿಸಿದ ರಂಗರಾಯರು ಈ ದಿನ ದಲಿತರ ಮತ್ತು ಬಡಜನರ ದಾರುಣ ಪರಿಸ್ಥಿತಿಯ ಬದಲಾವಣೆಗಾಗಿ ದುಡಿಯಬೇಕೆಂದು ನಿರ್ಧರಿಸಿ ವಕೀಲ ವೃತ್ತಿಯನ್ನು ತ್ಯಜಿಸಿ ಜೀವನ ಪರ್ಯಂತ ದಲಿತೋದ್ಧಾರಕ್ಕಾಗಿ ತಮ್ಮ ಶಕ್ತಿಯನ್ನೆಲ್ಲ ವಿನಿಯೋಗಿಸಲು ನಿರ್ಧರಿಸಿದರು. ಸಾರಸ್ವತ ಬ್ರಾಹ್ಮಣ ಸಮಾಜದ ಶ್ರೀಮಂತ ಕುಟುಂಬದಲ್ಲಿ ಜನಿಸಿದ ರಂಗರಾಯರು ಗೌತಮಬುದ್ಧ ಮತ್ತು ಬಸವಣ್ಣನವರ ಸಾಮಾಜಿಕ ಕ್ರಾಂತಿಯಿಂದ ಪ್ರಭಾವಿತರಾಗಿದ್ದರು. ದಲಿತರ ಸರ್ವತೋಮುಖ ಏಳಿಗೆಯ ಮಂತ್ರದೀಕ್ಷೆಯನ್ನು ಕೈಗೊಂಡು ಇಡೀ ಜೀವನವನ್ನು ಅದಕ್ಕಾಗಿ ಧಾರೆಯೆರೆಯಲು ನಿರ್ಧರಿಸಿದರು.

ಪ್ರಗತಿಗೆ ವಿದ್ಯೆಯೇ ಮೂಲವೆಂದು ನಂಬಿದ್ದ ಕುದ್ಮಲರು ಶೋಷಿತ ಸಮುದಾಯದ ಮಕ್ಕಳಿಗೆ ಶಿಕ್ಷಣ ನೀಡುವ ಕುರಿತು ಚಿಂತಿಸಿದರು. ಅಂದಿನ ಕಾಲದಲ್ಲಿ ಜಿಲ್ಲೆಯ ದಲಿತರಿಗೆ ಯಾವುದೇ ಶಾಲೆಗಳಲ್ಲಿ ಮುಕ್ತ ಪ್ರವೇಶ ಇರಲಿಲ್ಲ. ಅವರನ್ನು ಮುಟ್ಟುವುದಕ್ಕೂ ಸವರ್ಣೀಯರು ಹೇಸುತ್ತಿದ್ದರು. ಸಾರ್ವಜನಿಕ ಕೆರೆ,

ಬಾವಿ, ಹೋಟೆಲುಗಳಲ್ಲಿ ಪ್ರವೇಶ ನಿಶಿದ್ಧವಾಗಿತ್ತು. ಆದ ಕಾರಣ ದಲಿತರನ್ನು ವಿದ್ಯಾವಂತರನ್ನಾಗಿ ಮಾಡುವುದು ಮತ್ತು ಅವರ ಶ್ರೇಯಸ್ಸಿಗಾಗಿ ದುಡಿಯುವುದು ಅಂದಿನ ಕಾಲದಲ್ಲಿ ಬಲು ಅಪ್ರಿಯವಾಗಿದ್ದ ಕೆಲಸ. ದಲಿತರು ವಿದ್ಯಾವಂತರಾದರೆ ಅವರು ಆರ್ಥಿಕವಾಗಿ, ಸಾಮಾಜಿಕವಾಗಿ ಪ್ರಗತಿ ಹೊಂದಿದರೆ ಜೀತದ ಕೆಲಸವನ್ನು ಮುಂದೆ ಯಾರು ಮಾಡುತ್ತಾರೆ ಎಂಬ ಭಯ ಸವರ್ಣೀಯರ ವಿರೋಧಕ್ಕೆ ಕಾರಣವಾಗಿತ್ತು.

ಆದರೆ ರಂಗರಾಯರು ಡಿ.ಸಿ.ಎಂ(Depressed Classes Mission)ಎಂಬ ಸಂಸ್ಥೆ ಸ್ಥಾಪಿಸಿ ಮಂಗಳೂರಿನ ಕಂಕನಾಡಿ, ಮೂಲ್ಕಿ, ಬೋಳೂರು, ಉಡುಪಿ, ಬನ್ನಂಜೆ, ನೇಜಾರು, ಶೇಡಿಗುಡ್ಡೆ, ಅತ್ತಾವರ, ಬಾಬುಗುಡ್ಡೆ, ದಡ್ಡಲ್‌ಕಾಡುಗಳಲ್ಲಿ ಶಾಲೆಗಳನ್ನು ತೆರೆದರು. ಅಂದು ರಂಗರಾಯರು ಸ್ಥಾಪಿಸಿದ ಶಾಲೆಗಳಿಗೆ 'ಪಂಚಮ ಶಾಲೆ'ಗಳು ಎಂಬುದಾಗಿ ಕರೆಯುತ್ತಿದ್ದರು. ಶೇಡಿಗುಡ್ಡೆ ಎಂಬಲ್ಲಿ ವೃತ್ತಿಪರ ಶಿಕ್ಷಣ ನೀಡಲು ಕೈಗಾರಿಕಾ ತರಬೇತಿ ಶಾಲೆ ಸ್ಥಾಪಿಸಿದರು. ಹಿಂದು ಅಧ್ಯಾಪಕರು ಅಸ್ಪೃಶ್ಯರಿಗೆ ವಿದ್ಯೆ ಕಲಿಸಲು ನಿರಾಕರಿಸಿದ ಕಾರಣ ರಂಗರಾಯರು ಕ್ರೈಸ್ತ ಅಧ್ಯಾಪಕರನ್ನು ನೇಮಿಸಿಕೊಂಡರು. ಶಾಲೆಗಳಲ್ಲಿ ಮಧ್ಯಾಹ್ನದ ಊಟಕ್ಕೆ ವ್ಯವಸ್ಥೆ ಮಾಡಿ ಮಕ್ಕಳು ಶಾಲೆಗೆ ತಪ್ಪದೆ ಬರುವಂತೆ ಪ್ರೋತ್ಸಾಹಿಸಲು ಅಂದು ದಿನಕ್ಕೆ ಎರಡು ಪೈಸೆ ನಗದು ನೀಡುತ್ತಿದ್ದರು.

ಹಗಲಲ್ಲಿ ಸೂರ್ಯನ ಬೆಳಕನ್ನೂ ಸಹ ದಲಿತರು ಭಯದಿಂದ ವೀಕ್ಷಿಸುತ್ತಿದ್ದಾರೇನೋ ಎಂಬ ಅನುಮಾನ ಬರುವಂತಹ ದಿನಗಳಲ್ಲಿ ಕುದ್ಮುಲ್ ರಂಗರಾಯರು ಅಸ್ಪೃಶ್ಯರ ಮಕ್ಕಳನ್ನು ತೊಡೆಯ ಮೇಲೆರಿಸಿಕೊಂಡು ಅವರ ಕೈ ಮೈ ತೊಳೆದು ಶುಭ್ರಗೊಳಿಸುತ್ತಿದ್ದರು. ದಲಿತರ ಮನೆಗಳಿಗೆ ಹೋಗಿ ಅವರ ತಲೆಯನ್ನು ನೇವರಿಸಿದರು. ಅವರ ಕಣ್ಣೀರೊರೆಸಿದರು. ಅವರ ಜೊತೆ ಕುಳಿತು ಊಟಮಾಡಿದರು. ಅಸ್ಪೃಶ್ಯರೊಟ್ಟಿಗೆ ಅವರ ಹಟ್ಟಿಗಳಲ್ಲೇ ಮಲಗಿ ಮಕ್ಕಳನ್ನು ಶಾಲೆಗೆ ಸೇರಿಸಲು ಮನ ಒಲಿಸಿದರು. ಕುದ್ಮುಲರ ಉದಾರ ಮನೋಧರ್ಮದ ಫಲವಾಗಿಯೇ ಜಿಲ್ಲೆಯ ಬಹುಸಂಖ್ಯಾತ ದಲಿತ ಜನ ಸಮುದಾಯದ ಪ್ರತಿಭೆಗಳು ಶತಮಾನದ ಹಿಂದೆಯೇ ಬೆಳಕಿಗೆ ಬರತೊಡಗಿದವು. ಶಿಕ್ಷಣ ಮತ್ತು ಉದ್ಯೋಗದಲ್ಲಿ ಅವಕಾಶ ಸಿಕ್ಕರೆ ತಾವೂ ಹೇಗೆ ಉನ್ನತಿಗೇರಬಲ್ಲವೆಂಬುದನ್ನು ನಿರೂಪಿಸಿದರು

ಭಾರತೀಯ ಸಮಾಜಕ್ಕೆ ಅಂಟಿಕೊಂಡು ಬಂದಿದ್ದ ಅನೇಕ ಸಾಮಾಜಿಕ ಜಾಡ್ಯಗಳಲ್ಲಿ ಜೀತ ಪದ್ಧತಿಯೂ ಒದು ಶತಮಾನದ ಹಿಂದೆಯೇ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕುದ್ಮುಲ್ ರಂಗರಾಯರು ತುತ್ತು ಅನ್ನಕ್ಕಾಗಿ, ಅಲ್ಪ ಸಾಲಕ್ಕಾಗಿ

ಚೋಮನಂತೆ ಸವರ್ಣೀಯರ ಮನೆಯಲ್ಲಿ ಬಂಧಿಗಳಾಗಿದ್ದ ನೂರಾರು ಜೀತದಾಳುಗಳನ್ನು ಬಿಡಿಸಿದರು. ಸವರ್ಣೀಯರಿಂದ ಜೀವ ಬೆದರಿಕೆ ಬಂದರೂ ಕುಗ್ಗದೆ ಅವರು ಸ್ಥಾಪಿಸಿದ್ದ ಡಿ.ಸಿ.ಎಂ. ಮಿಶನ್ ಶಾಲೆಗಳಲ್ಲಿ ಮತ್ತು ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಬಡಗಿ, ನೇಯ್ಗೆ, ತೋಟಗಾರಿಕೆ, ಕಸೂತಿ, ರೇಷ್ಮೆ ಹುಳು ಸಾಕಾಣಿಕೆ ಇತ್ಯಾದಿಯಾಗಿ ವೃತ್ತಿಪರ ತರಬೇತಿ ನೀಡಿದರು. ಸ್ವಾವಲಂಬಿ ಜೀವನಕ್ಕೆ ದಾರಿ ತೋರಿದ್ದರು. ಅನ್ಯರ ಮನೆಯ ಅನ್ನಕ್ಕಿಂತ ಆತ್ಮಗೌರವದ ಗಂಜಿ ಊಟವೇ ದೊಡ್ಡದೆಂದು ತೋರಿಸಿಕೊಟ್ಟರು.

ಜಿಲ್ಲೆಯ ಅಲೆಮಾರಿ ಕೊರಗ ಜನಾಂಗದವರಿಗೆ ಕೋರ್ಟ್‌ಗುಡ್ಡೆ ಬಳಿ ಸ್ಥಾಲು ಮನೆಗಳನ್ನು ಕಟ್ಟಿಸಿ ಅವರ ಕುಲಕಸುಬಾದ ಗುಡಿಕೈಗಾರಿಕೆ ಅಭಿವೃದ್ಧಿಪಡಿಸಲು ನೆರವಾದರು. ದಲಿತರ ಆರ್ಥಿಕ ಅಭಿವೃದ್ಧಿಗಾಗಿ, ಸಹಕಾರ ಮನೋವೃತ್ತಿ ಬೆಳವಣಿಗೆಗಾಗಿ ಕೋರ್ಟ್‌ಹಿಲ್ಲ್‌ನಲ್ಲಿ ಆದಿ ದ್ರಾವಿಡ ಸಹಕಾರ ಸಂಘ ಸ್ಥಾಪಿಸಿದರು. ದಲಿತರು ವಿದ್ಯಾವಂತರಾಗುವುದನ್ನು ಸಹಿಸದ ಸಾರಸ್ವತ ಸಮಾಜ ಬಾಂಧವರೇ ಕುದ್ಮಲ್ ರಂಗರಾಯರನ್ನು ಬಹಿಷ್ಕರಿಸಿದರು. ಅವರಿಗೆ ದೇವಾಲಯ ಪ್ರವೇಶ ನಿಷೇಧಿಸಿದರು. ಕ್ಷೌರಿಕರು ಕ್ಷೌರ ಮಾಡಲು, ಅಗಸರು ರಾಯರ ಬಟ್ಟೆ ಮುಟ್ಟಲು ನಿರಾಕರಿಸುವಂಥ ವಾತಾವರಣ ಸೃಷ್ಟಿಸಿದರು. ಕುದ್ಮಲರು ಹಾದಿಯಲ್ಲಿ ಹೋಗುವಾಗ ಪುಂಡರು ಕಲ್ಲು ತೂರಿ ಅವಮಾನಿಸಿದರು. ಅವರ ಹೆಣ್ಣು ಮಕ್ಕಳನ್ನು ಮಾನಭಂಗ ಮಾಡುವುದಾಗಿ ಬೆದರಿಸಿ ಪತ್ರ ಬರೆದರು. ಈ ಅಪಮಾನ, ಕಿರುಕುಳ, ಬೆದರಿಕೆಗಳಿಗೆಲ್ಲ ಅಂಜದ ಕುದ್ಮಲರು 'ನನ್ನ ಶಾಲೆಯಲ್ಲಿ ಕಲಿತ ಒಬ್ಬ ದಲಿತ ಜನಾಂಗದ ಹುಡುಗ ದೊಡ್ಡ ವಿದ್ಯಾವಂತನಾಗಿ ಸರ್ಕಾರಿ ನೌಕರಿಗೆ ಸೇರಿ. ನಮ್ಮೂರ ರಸ್ತೆಗಳಲ್ಲಿ ಕಾರಿನಲ್ಲಿ ಓಡಾಡಬೇಕು. ಆಗ ರಸ್ತೆಯಲ್ಲಿ ಎದ್ದ ಧೂಳು ನನ್ನ ತಲೆಗೆ ತಾಗಿದರೆ ಅಂದು ನನ್ನ ಜನ್ಮ ಸಾರ್ಥಕ'ವೆಂದು ಹೇಳಿದರು(ಅವರ ಈ ಹೇಳಿಕೆಯನ್ನೇ ಈಗ ಕುದ್ಮಲರ ಸಮಾಧಿಯ ಮೇಲೆ ಬರೆಯಲಾಗಿದೆ)

ದಲಿತರ ವಿಮೋಚನೆಯಾಗಬೇಕಾದರೆ ಮೊದಲು ದಲಿತ ಮಹಿಳೆಯರ ವಿಮೋಚನೆಯಾಗಬೇಕೆಂದು ಅರಿತಿದ್ದ ಕುದ್ಮಲ್ ರಂಗರಾಯರು ದಲಿತ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ವಿಶೇಷ ಆದ್ಯತೆ ನೀಡಿದರು. ಜಿಲ್ಲೆಯ ದೂರದ ಹಳ್ಳಿಗಳಿಂದ ಬರುವ ಹೆಣ್ಣು ಮಕ್ಕಳಿಗಾಗಿ ನಗರದ ಶೇಡಿಗುಡ್ಡೆಯಲ್ಲಿ ವಿದ್ಯಾರ್ಥಿ ನಿಲಯ ತೆರೆದರು. ಇದರೊಂದಿಗೆ ಅಬಲೆಯರ ಮತ್ತು ವಿಧವೆಯರ ವಿದ್ಯಾಭ್ಯಾಸಕ್ಕಾಗಿ ಆಶ್ರಮಗಳನ್ನು ನಿರ್ಮಿಸಿದರು. ಈ ಆಶ್ರಮಗಳನ್ನು ಎಲ್ಲಾ ಜಾತಿಯ ಅನಾಥ ಮಹಿಳೆಯರಿಗೆ ರಕ್ಷಣೆಯೊಂದಿಗೆ ಜೀವನೋಪಾಯಕ್ಕೆ ಮಾರ್ಗಗಳನ್ನು ಕಲ್ಪಿಸಿದರು.

ಹಲವು ಅಸ್ಪೃಶ್ಯರ ಒಳಜಾತಿಗಳೊಂದಿಗೆ ವಿವಾಹ ಸಂಬಂಧ ಏರ್ಪಡಿಸಿದ ಕುದ್ಮುಲರು, ದೇವದಾಸಿಯರ ಮತ್ತು ವಿಧವೆಯರ ಮರು ವಿವಾಹ ಮಾಡಿಸಿ ಸಮಾಜದ ಒಳತಿಗಾಗಿ ತಮ್ಮನ್ನು ತಾವೇ ತೇಯ್ದುಕೊಂಡರು.

೧೯೧೨ರಲ್ಲಿ ತಮ್ಮ ಮಗಳು ರಾಧಾಬಾಯಿಯವರನ್ನು ಮದ್ರಾಸಿನ ಡಾ॥ ಸುಬ್ರಾಯನ್ ಅವರಿಗೆ ಕೊಟ್ಟು ಅಂತರ್ಜಾತಿಯ ಸರಳ ವಿವಾಹ ಮಾಡಿದರು. ಈ ಮದುವೆಯ ಪೌರೋಹಿತ್ಯವನ್ನು ಚಕ್ರವರ್ತಿ ರಾಜಗೋಪಾಲಾಚಾರ್ಯರು ವಹಿಸಿದ್ದರು. ಅದ್ದೂರಿ, ಆಡಂಬರ, ವಧು ದಕ್ಷಿಣೆ; ವರದಕ್ಷಿಣೆ, ದುಂದುವೆಚ್ಚಗಳಿಗೆ ಕಡಿವಾಣ ಹಾಕಿದ ಈ ಅಂತರ್ಜಾತಿ ಸರಳ ಮದುವೆಯಿಂದ ಪ್ರೇರಣೆಗೊಂಡ ಗಾಂಧೀಜಿಯವರು, ತಮ್ಮ ಮಗನಿಗೂ ಅಂತರ್ಜಾತಿ ವಿವಾಹ ಮಾಡುವುದರ ಮೂಲಕ ರಾಜಾಜಿಯವರ ಮಗಳನ್ನು ತಮ್ಮ ಸೊಸೆಯಾಗಿ ತಂದುಕೊಂಡರು.

ಸಾವಿರಾರು ವರ್ಷಗಳಿಂದ ಶೋಷಣೆಗೆ ಒಳಗಾದ ಜನರಿಗೆ ರಂಗರಾಯರು ಸ್ವಾಭಿಮಾನ, ಘನತೆಯನ್ನು ಗಳಿಸಿಕೊಟ್ಟರು. ದಲಿತರ ದಾಸ್ಯ ಸಂಕೋಲೆಗಳನ್ನು ಕಳಚಲು ಹಲವಾರು ಯೋಜನೆಗಳನ್ನು ಕೈಗೆತ್ತಿಕೊಂಡರು. ಸವರ್ಣೀಯರ ವಿರೋಧದ ನಡುವೆ ಹಣದ ಬೆಂಬಲವಿಲ್ಲದೆ, ಪತ್ರಿಕೆ, ರೈಲು, ಬಸ್ಸುಗಳಿಲ್ಲದ ಆ ಕಾಲದಲ್ಲಿ ಕಾಲ್ನಡಿಗೆಯಲ್ಲಿ ಊರೂರು ಅಲೆದು ದಲಿತರ ಧಮನಿಗಳಲ್ಲಿ ಹೊಸ ಚೈತನ್ಯ ತುಂಬಿದ ಕುದ್ಮುಲರು ಮಹಾ ಮಾನವತಾವಾದಿ, ದಲಿತೋದ್ಧಾರಕ; ಪ್ರಾತಃಸ್ಮರಣೀಯರು!

ಸಂವಿಧಾನ ಶಿಲ್ಪಿ ಅಂಬೇಡ್ಕರ್ ಜನ್ಮ ತಾಳುವ (೧೮೯೧ ಏಪ್ರಿಲ್೧೪) ಮೂರು ವರ್ಷ ಮೊದಲೇ ೧೮೮೮ರಲ್ಲಿ ದ.ಕ. ಜಿಲ್ಲೆಯ ದಲಿತ ಸಮುದಾಯಕ್ಕೆ ರಾಜಕೀಯ ಮೀಸಲಾತಿ ಒದಗಿಸಿಕೊಟ್ಟ ಕೀರ್ತಿ ಕುದ್ಮುಲರಿಗೆ ಸಲ್ಲುತ್ತದೆ. ಸ್ಥಳೀಯ ಸಂಸ್ಥೆಗಳಾದ ಜಿಲ್ಲಾ ಬೋರ್ಡ್ ಮತ್ತು ಪುರಸಭೆಯಲ್ಲಿ ದಲಿತ ಜನಾಂಗದ ಸದಸ್ಯರಿಗೆ ಅವಕಾಶ ನೀಡಬೇಕೆಂದು ಕುದ್ಮುಲರು ಜನರನ್ನು ಸಂಘಟಿಸಿ ಹೋರಾಟಕ್ಕಿಳಿದರು. ಅವರ ಅನವರತ ಹೋರಾಟದ ಫಲವಾಗಿ ಅಂಗರ ಮಾಸ್ತರ್ ಮತ್ತು ಗೋವಿಂದ ಮಾಸ್ತರ್ ಇಬ್ಬರೂ ಪ್ರಥಮ ಬಾರಿಗೆ ಸ್ಥಳೀಯ ಸಂಸ್ಥೆಗಳಿಗೆ ಸದಸ್ಯರಾಗಲು ಅವಕಾಶವಾಯಿತು.

ಕುದ್ಮುಲರ ನಿಸ್ವಾರ್ಥ ಸೇವೆ ದೇಶ ವಿದೇಶಗಳಲ್ಲಿ ಖ್ಯಾತಿ ಪಡೆಯಿತು. ಅವರ ಸಮಾಜ ಸುಧಾರಣೆಯ ಕಾರ್ಯವನ್ನು ಮೆಚ್ಚಿ ಅಮೇರಿಕಾದ ಖ್ಯಾತ ಉದ್ಯಮಿ ಹೆನ್ರಿ ಪೋರ್ಡ್, ಜಸ್ಟಸ್ ವಿಲ್ಬರ್ಟ್, ಡಾ. ಕಾರ್ನಾಟ್ ಹೀಗೆ ಹತ್ತಾರು ಶ್ರೀಮಂತರು ಸಾವಿರಾರು ಡಾಲರ್‌ಗಳ ನಿಧಿಯನ್ನು ಡಿ.ಸಿ.ಎಂ. ಸಂಸ್ಥೆಗೆ ಅರ್ಪಿಸಿದರು.

ಮಂಗಳೂರಿಗೆ ಅಂದಿನ ಕಾಲದಲ್ಲಿ ಆಗಮಿಸುತ್ತಿದ್ದ ಯಾರೇ ಪ್ರಮುಖರು ಡಿ.ಸಿ.ಎಂ. ಸಂಸ್ಥೆಗೆ ಭೇಟಿ ನೀಡದೆ ಹೋಗುತ್ತಿರಲಿಲ್ಲ. ಗುರುದೇವ ರವೀಂದ್ರನಾಥ್ ಠಾಗೋರ್, ದೀನಬಂಧು ಸಿ.ಎಸ್. ಅಂಡ್ರೋಸ್, ಡಾ. ಅನಿಬೆಸೆಂಟ್, ಗೋಪಾಲಕೃಷ್ಣ ಗೋಖಲೆ ಮತ್ತು ಜಿ.ಕೆ. ದೇವಧರ್ ಇವರೆಲ್ಲಾ ಸಂಸ್ಥೆಗೆ ಭೇಟಿ ನೀಡಿ ಕುದ್ಮಲರ ಮಾನವೀಯ ಸೇವೆಯನ್ನು ಕಣ್ಣಾರೆ ಕಂಡು ಅಭಿನಂದಿಸಿದರು.

ಗಾಂಧೀಜಿ ಅವರು ೧೯೩೪ ಫೆಬ್ರವರಿ ೨೪ ರಂದು ಮಂಗಳೂರಿಗೆ ಬಂದಾಗ ಡಿ.ಸಿ.ಎಂ. ಸಂಸ್ಥೆಗೆ ಭೇಟಿ ನೀಡಿ, ರಂಗರಾಯರು ಮಾಡಿದ ಮಾನವೀಯ ಸೇವಾ ಕಾರ್ಯಗಳನ್ನು ಕಣ್ಣಾರೆ ಕಂಡು ಅತ್ಯಂತ ಸಂತಸಗೊಂಡರು.

ನಂತರ ಸಂಜೆ ನಡೆದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಗಾಂಧೀಜಿ: 'ಇಂದು ನಾನು ಕೆಲವೊಂದು ವಿಚಾರಗಳನ್ನು ಪೂಜ್ಯ ರಂಗರಾಯರಿಂದ ಅರಿತುಕೊಂಡೆ. ಅವರು ನಮಗೆ ಒಂದು ಉತ್ತಮ ಮೇಲ್ಪಂಕ್ತಿಯನ್ನು ತೋರಿಸಿದ್ದಾರೆ. ಅಸ್ಪೃಶ್ಯ ಜನಾಂಗದ ಪುನರುದ್ಧಾರ ಕಾರ್ಯದಲ್ಲಿ ಇಂದು ನನ್ನನ್ನು, ಆ ದಾರಿಯಲ್ಲಿ ಮುನ್ನಡೆದಿರುವ ರಂಗರಾಯರು ನನಗೆ ಮಾರ್ಗದರ್ಶನ ಮತ್ತು ಸ್ಫೂರ್ತಿಯನ್ನಿತ್ತಿದ್ದಾರೆ. ಅಸ್ಪೃಶ್ಯತಾ ನಿವಾರಣಾ ಕಾರ್ಯದಲ್ಲಿ ಕುದ್ಮಲ್ ರಂಗರಾಯರು ನಿಜವಾಗಿಯೂ ನನ್ನ ಗುರುಗಳು' ಎಂಬುದಾಗಿ ಘೋಷಿಸಿದರು.

ಸಾರ್ವಜನಿಕ ಜೀವನದಲ್ಲಿ ಪ್ರಾಮಾಣಿಕತೆಯ ಹೆಗ್ಗುರುತೆನಿಸಿಕೊಂಡಿದ್ದ ರಂಗರಾಯರು ಅಧಿಕಾರ ಸ್ಥಾನಗಳನ್ನು ಧಿಕ್ಕರಿಸಿ ಸೇವಾ ಸ್ಥಾನಗಳನ್ನು ಆರಿಸಿಕೊಂಡವರು. ಆದರೂ ಆರ್ಥಿಕ ಸಂಕಷ್ಟದಿಂದ ಡಿ.ಸಿ.ಎಂ. ಸಂಸ್ಥೆಯನ್ನು ಮುನ್ನಡೆಸಲಾಗದೆ ೧೯೨೨ರಲ್ಲಿ ಭಾರತ ಸೇವಕ ಸಂಘಕ್ಕೆ ಒಪ್ಪಿಸಿದರು. ತಾವೂ ಬ್ರಹ್ಮಸಮಾಜ ಸೇರಿ ಈಶ್ವರಾನಂದ ಎಂಬ ಹೆಸರಿನಿಂದ ಸನ್ಯಾಸ ಸ್ವೀಕಾರಮಾಡಿದರು. ತಮಗೆ ಸರಕಾರವು ಕೊಟ್ಟಿದ್ದ 'ರಾವ್ ಸಾಹೇಬ್' ಎಂಬ ಬಿರುದಿನ ಪದಕ ಮತ್ತು ನೂರಾರು ಸೇವಾ ಪದಕಗಳು ಜೊತೆಯಲ್ಲಿದ್ದರೆ ಒಂದು ರೀತಿಯ ಹೆಮ್ಮೆ, ಅಹಂಕಾರ ಸದಾ ಕಾಡುವುದೆಂದು ಭಾವಿಸಿ ಸನ್ಯಾಸ ಸ್ವೀಕಾರದ ಪೂಜಾ ಸಮಾರಂಭದ ಹೋಮಕುಂಡದಲ್ಲಿ ಉರಿಯುತ್ತಿದ್ದ ಅಗ್ನಿಗೆ ಎಲ್ಲಾ ಬಿರುದು, ಪದಕ, ಪ್ರಶಸ್ತಿ ಪತ್ರಗಳನ್ನು ಸಮರ್ಪಿಸಿದರು. ಇಳಿವಯಸ್ಸಿನಲ್ಲಿ ಹೃದಯಬೇನೆಯ ಕಾಯಿಲೆಗೆ ತುತ್ತಾದ ರಂಗರಾಯರು ೧೯೨೮ರ ಜೂನ್ ೩೦ರಂದು ನಿಧನರಾದರು. ಅಲ್ಲಿಗೆ ದಲಿತರ ಶ್ರೇಯೋಭಿವೃದ್ಧಿಗಾಗಿ ತುಡಿಯುತ್ತಿದ್ದ ಜೀವ ಸೆಲೆ ಬತ್ತಿದಂತಾಯಿತು.

ಸಾಭಾರ–ಪ್ರಜಾವಾಣಿ.

***

ಕ್ರೈಸ್ತ ಮತಾಂತರ

–ಗಾಂಧೀ

ಕ್ರೈಸ್ತನಾಗುವುದರಿಂದ ಮಾತ್ರವೇ ಮನುಷ್ಯ ಸ್ವರ್ಗಕ್ಕೆ ಹೋಗಬಲ್ಲ, ಮೋಕ್ಷವನ್ನು ಹೊಂದಬಲ್ಲ, ಎಂಬುದನ್ನು ನಂಬಲು ನನ್ನಿಂದ ಸಾಧ್ಯವಾಗಲಿಲ್ಲ. ನಾನು ಹೀಗೆ ಕೆಲವು ಕ್ರೈಸ್ತ ಮಿತ್ರರೊಂದಿಗೆ ಸ್ಪಷ್ಟವಾಗಿ ಹೇಳಿದಾಗ, ಅವರಿಗೆ ಆಶ್ಚರ್ಯವೂ ಖೇದವೂ ಉಂಟಾಯಿತು. ಆದರೆ ನಾನು ನಿರುಪಾಯನಾಗಿದ್ದೆನು.

ನನ್ನ ಕಷ್ಟಗಳು ಇನ್ನೂ ಆಳವಾಗಿದ್ದವು. 'ಏಸು ಒಬ್ಬನೇ ಪರಮಾತ್ಮನ ಅವತಾರ ಪುತ್ರ, ಅವನನ್ನು ನಂಬಿದವರಿಗೆ ಮಾತ್ರವೇ ಅಮೃತತ್ವ ದೊರೆಯುತ್ತದೆ' ಎಂಬುದನ್ನು ನಂಬುವುದು ನನ್ನಿಂದ ಸಾಧ್ಯವಿರಲಿಲ್ಲ. ದೇವರಿಗೆ ಮಕ್ಕಳು ಇರುವುದಾದರೆ ನಾವೆಲ್ಲ ಅವನ ಮಕ್ಕಳೇ. ಏಸುವು ದೇವರ ಹಾಗೆ ಇದ್ದಾನೆ ಅಥವಾ ಅವನೇ ದೇವರು ಎಂದು ಹೇಳುವುದಾದರೆ, ಮನುಷ್ಯರೆಲ್ಲ ದೇವರಂತೆ ಇದ್ದಾರೆ, ಅಥವಾ ಅವರೆಲ್ಲ ದೇವರು ಎನ್ನಬಹುದು. ಏಸುವು ತನ್ನ ಮರಣದಿಂದಲೂ, ರಕ್ತವನ್ನು ಚೆಲ್ಲಿಯೂ ಪ್ರಪಂಚದ ಪಾಪವನ್ನೆಲ್ಲ ಪರಿಹಾರ ಮಾಡಿದನೆಂಬ ಮಾತನ್ನು ಅಕ್ಷರಶಃ ನಂಬಲು ನನ್ನ ವಿವೇಕ ಬುದ್ಧಿ ಒಪ್ಪಲಿಲ್ಲ. ಇದನ್ನು ರೂಪಕಾಲಂಕಾರವಾಗಿ ಪರಿಗಣಿಸಿದರೆ, ಸ್ವಲ್ಪ ಸತ್ಯ ಇರಬಹುದು. ಎರಡನೆಯದಾಗಿ, ಕ್ರೈಸ್ತಮತಕ್ಕನುಸಾರವಾಗಿ, ಮನುಷ್ಯರಿಗೆ ಮಾತ್ರ ಆತ್ಮವುಂಟು; ಉಳಿದ ಪ್ರಾಣಿಗಳಿಗೆ ಇಲ್ಲ, ಅವುಗಳ ಮರಣದೊಂದಿಗೆ ಅವುಗಳು ಸರ್ವಥಾ ನಾಶವಾಗುತ್ತವೆ. ನನ್ನ ನಂಬಿಕೆ ಇದಕ್ಕೆ ವಿರುದ್ಧವಾಗಿದ್ದಿತು. ಏಸುವು ತ್ಯಾಗಿ, ಮಹಾತ್ಮ, ದೈವಾಂಶಪುರುಷ, ಧರ್ಮೋಪದೇಶಕ, ಹುತಾತ್ಮನೆಂದು ನಾನು ನಂಬಲು ಸಿದ್ಧನಾಗಿದ್ದೆನು. ಆದರೆ ಆತನು ಸೃಷ್ಟಿಯಲ್ಲಿ ಪುರುಷೋತ್ತಮನೆಂದು ಒಪ್ಪಲು ನಾನು ಸಿದ್ಧವಿರಲಿಲ್ಲ. ಆತನು ಶಿಲುಬೆಯ ಮೇಲೆ ಮೃತ್ಯುವನ್ನು ಹೊಂದಿದುದು ಪ್ರಪಂಚಕ್ಕೆ ಒಂದು ದೊಡ್ಡ ಆದರ್ಶ. ಅದರಲ್ಲಿ ಗುಪ್ತವಾದ ರಹಸ್ಯ, ಚಮತ್ಕಾರವಾಗಲಿ ಪವಾಡವಾಗಲಿ ಇದ್ದಿತೆಂಬುದನ್ನು ನನ್ನ ಹೃದಯ ಒಪ್ಪಲಿಲ್ಲ. ಇತರ ಧರ್ಮಾವಲಂಬಿ ಸಾಧುಸಂತರ ಪವಿತ್ರ ಜೀವನದಲ್ಲಿ ದೊರಕದಿದ್ದ ಯಾವ ಮಹತ್ವವೂ, ಕ್ರೈಸ್ತಧರ್ಮದ ಪವಿತ್ರ ಜೀವಿಗಳಿಂದ ನನಗೆ ದೊರಕಲಿಲ್ಲ. ಕ್ರೈಸ್ತರಲ್ಲಿ, ಭಗವಂತನ ಕೃಪೆಯಿಂದ ಉಂಟಾಗುತ್ತಿದ್ದ ಪರಿವರ್ತನೆ, ಇತರ ಧರ್ಮಾನುಯಾಯಿಗಳಲ್ಲಿಯೂ ಭಗವಂತನ ಕೃಪೆಯಿಂದ ಉಂಟಾಗುತ್ತಿದ್ದುದು ನನಗೆ ಗೊತ್ತಿದ್ದಿತು. ಸಿದ್ಧಾಂತದ ದೃಷ್ಟಿಯಿಂದ ನೋಡಿದರೂ ನನಗೆ ಕ್ರೈಸ್ತ ಸಿದ್ಧಾಂತದಲ್ಲಿ ಯಾವ ಅಲೌಕಿಕತೆಯೂ ಕಾಣಬರಲಿಲ್ಲ. ತ್ಯಾಗದೃಷ್ಟಿಯಿಂದ ನೋಡಿದರೆ ಹಿಂದೂ ಧರ್ಮಾನುಯಾಯಿಯ ತ್ಯಾಗ, ಕ್ರೈಸ್ತರನ್ನು ಮೀರಿಸಿದುದಾಗಿ ನನಗೆ ತೋರಿತು. ಕ್ರೈಸ್ತಧರ್ಮ ಸಂಪೂರ್ಣ ಧರ್ಮಾವೆಂದಾಗಲಿ ಸರ್ವೋತ್ಕೃಷ್ಟ ಧರ್ಮವೆಂದಾಗಲಿ ಪರಿಗಣಿಸುವುದು ನನ್ನಿಂದ ಸಾಧ್ಯವಾಗಲಿಲ್ಲ.

ಸಾಭಾರ–ಗಾಂಧೀಜಿಯವರ ಆತ್ಮಕಥೆಯಿಂದ.

ಹಳ್ಳಿಯ ಹೈದ ಉಕ್ಕಿನ ಮನುಷ್ಯನಾದುದು

–ಸುಭಾಷ್ ಹೂಗಾರ

ಲಕ್ಷ್ಮಿನಿವಾಸ್ ಮಿತ್ತಲ್ ಹುಟ್ಟಿದ್ದು ೧೯೫೦ರ ಜೂನ್ ೧೫ರಂದು ರಾಜಾಸ್ತಾನದ ಚುರು ಜಿಲ್ಲೆಯ ಸಾದಲ್ಪುರ ಗ್ರಾಮದಲ್ಲಿ. ನಂತರ ಲಕ್ಷ್ಮಿನಿವಾಸ್ ಆರನೆಯ ವಯಸ್ಸಿನವರಾಗಿದ್ದಾಗ ಮಿತ್ತಲ್ ಕುಟುಂಬ ಕೋಲ್ಕತಾಗೆ ತೆರಳಿ ಅಲ್ಲಿಯೇ ಶಾಶ್ವತವಾಗಿ ನೆಲೆಯೂರಿತು. ಈತನ ತಂದೆ ಮೋಹನ್ ಮಿತ್ತಲ್ ಕೋಲ್ಕತಾದಲ್ಲಿ ಸ್ಟೀಲ್ ಕಂಪೆನಿಯೊಂದರಲ್ಲಿ ಪಾಲುದಾರರಾಗಿದ್ದರು. ಅಜ್ಜ ತಾರಾಚಂದ್ ಅಲ್ಲಿನ ಪ್ರಸಿದ್ಧ ಘನಶ್ಯಾಂದಾಸ್ ಕಂಪನಿಯ ಉದ್ಯೋಗಿ. ಲಕ್ಷ್ಮೀನಿವಾಸ್ ತಮ್ಮ ವಿದ್ಯಾಭ್ಯಾಸವೆಲ್ಲವನ್ನೂ ಕೋಲ್ಕತ್ತಾದಲ್ಲಿಯೇ ಮುಗಿಸಿದರು. ಓದಿನಲ್ಲೂ ಚುರುಕಾಗಿದ್ದ ಇವರು, ಬಿ.ಕಾಂ. ಓದುವಾಗ ಅಲ್ಲಿನ ಸೇಂಟ್ ಕ್ಸೇವಿಯರ್ ಕಾಲೇಜ್‌ಗೆ ಪ್ರಥಮ ಸ್ಥಾನವನ್ನೂ ಪಡೆದಿದ್ದರು. ಓದಿನ ಜತೆಜತೆಗೆ ತಂದೆಯ ಉದ್ಯೋಗದಲ್ಲಿಯೂ ಲಕ್ಷ್ಮೀನಿವಾಸ್ ಸಕ್ರೀಯರಾಗಿದ್ದರು. ಕ್ರಮೇಣ ಉದ್ಯೋಗದಲ್ಲೂ ಹೆಚ್ಚಿನ ಆಸಕ್ತಿ ಬೆಳಸಿಕೊಂಡರು. ೧೯೮೮ರ ಸುಮಾರಿಗೆ ವಹಿವಾಟನ್ನು ಭಾರತದಲ್ಲಿ ಹೆಚ್ಚು ವಿಸ್ತರಣೆ ಮಾಡುವುದೋ ಅಥವಾ ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಗಮನ ಕೇಂದ್ರೀಕರಿಸುವುದೋ ಎಂಬ ವಿಚಾರದಲ್ಲಿ ತಮ್ಮ ತಂದೆ ಮತ್ತು ಸಹೋದರನ ಜತೆಗೆ ಭಿನ್ನಾಭಿಪ್ರಾಯ ಉಂಟಾಯಿತು. ಇಲ್ಲಿಯೇ ಹೆಚ್ಚು ವಹಿವಾಟು ವಿಸ್ತರಣೆ ಮಾಡಬೇಕೆಂಬುದು ಇವರ ತಂದೆಯ ಅಭಿಮತವಾಗಿತ್ತು. ಆದರೆ ವಿದೇಶಗಳಲ್ಲೂ ನಮ್ಮ ಉದ್ಯಮ ವಿಸ್ತರಣೆ ಮಾಡಬೇಕೆಂಬುದು ಇವರ 'ಹಠ'ವಾಗಿತ್ತು. ಈ ಭಿನ್ನಾಭಿಪ್ರಾಯದ ಪರಿಣಾಮವಾಗಿ ಲಕ್ಷ್ಮಿನಿವಾಸ್ ಮಿತ್ತಲ್ ತಮ್ಮ ತಂದೆ, ಸಹೋದರರಿಂದ ಪ್ರತ್ಯೇಕಗೊಂಡು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿಯೇ 'ಆಟ'ವಾಡಲು ನಿರ್ಧರಿಸಿದರು.

ಈಗ ವಿಶ್ವದ ೪ಖಂಡಗಳಲ್ಲಿನ ೧೪ರಾಷ್ಟ್ರಗಳಲ್ಲಿ ಮಿತ್ತಲ್ ಸ್ಟೀಲ್ ಕಂಪನಿ ಅಸ್ತಿತ್ವ ಹೊಂದಿದೆ. ರುಮೇನಿಯಾ, ಬೋಸ್ನಿಯಾ, ದಕ್ಷಿಣ ಆಫ್ರಿಕ, ಹಾಲೆಂಡ್, ಪೋಲೆಂಡ್, ಕಝುಕಿಸ್ತಾನ್, ಇಂಗ್ಲೆಂಡ್, ಅಮೆರಿಕ, ಉಕ್ರೇನ್ ಮುಂತಾದ ಕಡೆಗಳಲಿ ಮಿತ್ತಲ್ ಸ್ಟೀಲ್ ಕಂಪನಿಯ ತಯಾರಿಕಾ ಘಟಕಗಳಿವೆ. ಅಲ್ಲದೆ ಇನ್ನೂ ಕೆಲ ರಾಷ್ಟ್ರಗಳಲ್ಲಿನ ಕಂಪನಿಗಳೊಂದಿಗೆ ಪಾಲುದಾರಿಕೆಯೂ ಇದೆ.

ಈಗಲೂ ಭಾರತೀಯ ಪಾಸ್‌ಪೋರ್ಟ್ ಇಟ್ಟುಕೊಂಡಿರುವ ಲಕ್ಷ್ಮೀನಿವಾಸ್ ಮಿತ್ತಲ್ ಭಾರತೀಯನೆಂಬ ಕಾರಣಕ್ಕಾಗಿ ಯೂರೋಪಿಯನ್ನರ ವಿರೋಧ ಎದುರಿಸಬೇಕಾಗಿ ಬಂದಾಗಲೂ ಭಾರತೀಯತೆಯನ್ನು ಬಿಟ್ಟುಕೊಡಲಿಲ್ಲ. ನನಗೆ 'ಭಾರತೀಯ ಪಾಸ್‌ಪೋರ್ಟ್ ಹೊಂದಲು ಅತ್ಯಂತ ಹೆಮ್ಮೆ ಎನಿಸುತ್ತದೆ. ನಾನು ಹುಟ್ಟಿದ್ದು, ಬೆಳೆದಿದ್ದು, ಓದಿದ್ದು ಎಲ್ಲವೂ ಇಲ್ಲೇ. ಈ ದೇಶಕ್ಕೂ ನನಗೂ ಹೊಕ್ಕಳುಬಳ್ಳಿಯ ಸಂಬಂಧ. ಅದನ್ನು ಅಲ್ಲಗೆಳೆಯಲು ಸಾಧ್ಯವೇ ಇಲ್ಲ.' ಎಂದು ಸಂದರ್ಶನವೊಂದರಲ್ಲಿ ಹೇಳಿಕೊಂಡಿದ್ದಾರೆ.

ಬೀದಿ ದೀಪವೂ ಇಲ್ಲದ ಕುಗ್ರಾಮವೊಂದರಲ್ಲಿ ಜನಿಸಿ ಆಗಾಧ ಎತ್ತರಕ್ಕೆ ಬೆಳೆದಿರುವ ಮಿತ್ತಲ್ ಹೆಮ್ಮೆಯ ಭಾರತೀಯ.

ಭಾರತೀಯ ಮೂಲದ ಅನಿವಾಸಿ ಉದ್ಯಮಿ ಲಕ್ಷ್ಮೀನಿವಾಸ್ ಮಿತ್ತಲ್ ಈಗ ಬ್ರಿಟಿಷ್ ಪ್ರಜೆ. ಇಂಗ್ಲೆಂಡ್‌ನ ನಂ.೧ ಶ್ರೀಮಂತ. ಜಗತ್ತಿನ ಕುಬೇರರ ಸಾಲಿನಲ್ಲಿ ಬಿಲ್‌ಗೇಟ್ಸ್, ವಾರನ್‌ಬಫೆಟ್ ನಂತರದ ಮೂರನೆಯ ವ್ಯಕ್ತಿ. ವಿಶ್ವ ಉಕ್ಕು ಉದ್ಯಮದಲ್ಲಿ ಅಗ್ರಗಣ್ಯ ಹೆಸರು. ಜಗತ್ತಿನ ನಂ.೧ ಉಕ್ಕು ಕಂಪನಿಯಾಗಿರುವ ಮಿತ್ತಲ್ ಸ್ಟೀಲ್ ಮಾಲೀಕರಾಗಿರುವ ಇವರು ಇತ್ತೀಚೆಗಷ್ಟೆ ನಂ.೨ ಉಕ್ಕುಕಂಪನಿಯಾಗಿರುವ ಲಕ್ಸಂಬರ್ಗ್ ಮೂಲದ ಆರ್ಸೆಲರ್ ಕಂಪನಿಯ ಶೇ.೪೯.೫ ಷೇರುಗಳನ್ನು ಖರೀದಿ ಮಾಡುವ ಮೂಲಕ ಜಗತ್ತಿನ ಅಬೇಧ್ಯ ಉಕ್ಕಿನ ಕೋಟೆ ನಿರ್ಮಿಸುವ ತಮ್ಮ ಕನಸಿನತ್ತ ದೃಢವಾದ ಹೆಜ್ಜೆ ಇರಿಸಿರುವ ಛಲದಂಕ ಮಲ್ಲ.

ಆರ್ಸೆಲರ್ ಕಂಪನಿಯೊಂದಿಗೆ ಮಿತ್ತಲ್ ಸ್ಟೀಲ್ ಕಂಪನಿಯನ್ನು ವಿಲೀನ ಮಾಡುವುದು ಲಕ್ಷ್ಮೀನಿವಾಸ್ ಮಿತ್ತಲರಿಗೆ ಸುಲಭದ ಹಾದಿಯಾಗಿರಲಿಲ್ಲ. ಇದಕ್ಕೆ ಎದುರಾದ ಎಡರುತೊಡರುಗಳು ಅಷ್ಟಿಷ್ಟಲ್ಲ. ಯೂರೋಪಿನ ರಾಜಕಾರಣಿಗಳು, ಆರ್ಸೆಲರ್ ಕಂಪನಿಯ ಚೀಫ್‌ಎಕ್ಸಿಕ್ಯೂಟಿವ್ ಗಯ್ ಡುಲ್ಲೆ ನೇತೃತ್ವದ ಗುಂಪು ಮತ್ತು ಲಕ್ಸಂಬರ್ಗ್‌ನ ಸರ್ಕಾರಗಳು ಮಿತ್ತಲ್ ಅವರ ಪ್ರಸ್ತಾವನೆಯನ್ನು ಖಡಾಖಂಡಿತವಾಗಿ ವಿರೋದಿಸಿದ್ದರು. ಈ ಎಲ್ಲ ವಿರೋಧಗಳ ಜೊತೆಗೆ ಇಲ್ಲ ಸಲ್ಲದ ಆರೋಪಗಳು ಕೂಡ.

ಜತೆಗೆ ಈತ 'ಭಾರತೀಯ, ನಾನ್ ಯೂರೋಪಿಯನ್' ಎಂಬುದರಿಂದ ಆರಂಭವಾಗಿ, ಈತನದು ಕುಟುಂಬ ಮಾಲಿಕತ್ವದ ಕಂಪನಿ, ಇವರ ಪುತ್ರ ಆದಿತ್ಯ ಮಿತ್ತಲ್‌ಗೆ ಇಷ್ಟೊಂದು ಆಗಾಧವಾದ ಉದ್ಯಮವನ್ನು ನಡೆಸಲು ಅಗತ್ಯವಿರುವ ಬುದ್ಧಿಯಾಗಲಿ ಅನುಭವವಾಗಿಲಿ ಇಲ್ಲ ಎಂಬ ಹಿಯಾಳಿಕೆಯ ಮಾತುಗಳು ಬೇರೆ. ಅಷ್ಟೇ ಅಲ್ಲ. ಆರ್ಸೆಲರ್ ಕಂಪನಿಯನ್ನು ಖರೀದಿಸಿ ಅದರ ಕೆಲ ಘಟಕಗಳನ್ನು ಮಿತ್ತಲ್ ಮುಚ್ಚಿ ಬಿಡುತ್ತಾರೆ. ಹತ್ತಾರು ಸಾವಿರ ಜನರನ್ನು ಕೆಲಸದಿಂದ ಕಿತ್ತು ಹಾಕಿ ನಿರುದ್ಯೋಗಿಗಳನ್ನಾಗಿ ಮಾಡುತ್ತಾರೆ ಎಂಬ ಅಪಪ್ರಚಾರವನ್ನೂ ಮಾಡಲಾಯಿತು.

ಆದರೆ, ಲಕ್ಷ್ಮೀನಿವಾಸ್ ಮಿತ್ತಲ್ ಮಾತ್ರ ಇಂಥ ಪ್ರತಿಕೂಲವಾತಾವರಣದಿಂದ ಕೂದಲೆಳೆಯಷ್ಟೂ ಎದೆಗುಂದಿರಲಿಲ್ಲ. ಕೆಲ ತಿಂಗಳ ಹಿಂದೆ ಭಾರತಕ್ಕೆ ಬಂದಾಗ ಅವರು ಆಡಿದ ಮಾತುಗಳಿಂದ ಈ ಅಂಶ ಸ್ಪಷ್ಟವಾಗಿತ್ತು. 'ನಾವು ಆರ್ಸೆಲರ್ ಕಂಪನಿಯ ವಶಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಅದಕ್ಕೆ ವಿರೋಧವೂ ಇದೆ. ಆದರೆ, ಅಂತಿಮವಾಗಿ ನಮಗೆ ಜಯ ಸಿಗುತ್ತದೆ. ಏಕೆಂದರೆ ನಮ್ಮ ಪ್ರಸ್ತಾವನೆಯಲ್ಲಿ ಉಕ್ಕು ಉದ್ಯಮ ಮತ್ತು ಆರ್ಸೆಲರ್ ಕಂಪನಿಯ ಷೇರುದಾರರ ಹಿತ ಅಡಗಿದೆ. ಇದು ಅವರಿಗೂ ಚೆನ್ನಾಗಿ ಗೊತ್ತಿದೆ' ಎಂದಿದ್ದರು ಮಿತ್ತಲ್.

ಕೊನೆಗೂ ಹಾಗೆಯೇ ಆಯಿತು. ಐದು ತಿಂಗಳ ಸತತ ಹೋರಾಟದ ನಂತರ ಜೂನ್೨೫ ರಂದು ಆರ್ಸೆಲರ್ ಕಂಪನಿಯ ನಿರ್ದೇಶಕ ಮಂಡಳಿ ಮಿತ್ತಲ್ ಸ್ಟೀಲ್ ಜೊತೆಗಿನ ವಿಲೀನ ಪ್ರಕ್ರಿಯೆಗೆ ಸರ್ವಾನುಮತದ ನಿರ್ಣಯ ಕೈಗೊಂಡಿತು. ಕೆಲ ತಿಂಗಳ ಹಿಂದೆ ಮಿತ್ತಲ್ ಅವರ ಪ್ರಸ್ತಾವನೆಯನ್ನು ಸರ್ವಾನುಮತದಿಂದ ವಿರೋದಿಸಿದ್ದ ನಿರ್ದೇಶಕ ಮಂಡಳಿಯೇ ಈಗ ಸರ್ವಾನುಮತದ ಒಪ್ಪಿಗೆ ನೀಡಿದೆ. ಇದು ಲಕ್ಷ್ಮೀನಿವಾಸ್ ಮಿತ್ತಲ್‌ರ

ಬುದ್ದಿಶಕ್ತಿ, ದೂರದೃಷ್ಟಿ, ತಂತ್ರಗಾರಿಕೆ, ಚಾಕಚಕ್ಯತೆ ಮತ್ತು ಇಂಥ ಬೃಹತ್ ವ್ಯವಹಾರವನ್ನು ನಿಭಾಯಿಸುವ ಅವರ ಧೈರ್ಯ, ಸಾಮರ್ಥ್ಯಕ್ಕೆ ಸ್ಪಷ್ಟ ಉದಾಹರಣೆ.

ಕೆಲವೇ ದಿನಗಳ ನಂತರ ಅಂದರೆ ಜೂನ್ ೩೦ ರಂದು ನಡೆದ ಆರ್ಸೆಲರ್ ಕಂಪನಿಯ ಷೇರುದಾರರ ಸಾಮಾನ್ಯ ಸಭೆಯಲ್ಲಿಯೂ ಈ ಒಪ್ಪಂದಕ್ಕೆ ಬೆಂಬಲ ವ್ಯಕ್ತವಾಗಿದೆ. ಮಿತ್ತಲ್ ಮತ್ತು ಸೆವರ್ಸ್ಟಲ್ ಕಂಪನಿಗಳ ಪ್ರಸ್ತಾವನೆಗಳೆರಡನ್ನೂ ಈ ಸಭೆಯಲ್ಲಿ ಚರ್ಚಿಸಿದಾಗ ಶೇ ೫೮ರಷ್ಟು ಷೇರುದಾರರು ಸೆವರ್ಸ್ಟಲ್ ಕಂಪನಿಯ ಪ್ರಸ್ತಾವನೆಯನ್ನೂ ತಿರಸ್ಕರಿಸುವ ಮೂಲಕ ಮಿತ್ತಲ್ ಪರ ನಿಂತಿದ್ದಾರೆ.

ಇದನ್ನು ಸಾಧಿಸಲು ಮಿತ್ತಲ್ ಅವರು ತಮ್ಮ ಪ್ರಸ್ತಾವನೆಯಲ್ಲಿ ಸಾಕಷ್ಟು ಬದಲಾವಣೆಗಳನ್ನು ಮಾಡಬೇಕಾಯಿತು. ಜನವರಿ ೨೭ ರಂದು ಮೊದಲ ಬಾರಿಗೆ ಆರ್ಸೆಲರ್ ವಶಕ್ಕೆ ಪ್ರಸ್ತಾವನೆ ಸಲ್ಲಿಸಿದಾಗ ೧೮ ಶತಕೋಟಿ ಯೂರೋಗೆ(ಅಂದಾಜು ೧,೦೬,೨೦೦ ಕೋಟಿ ರೂಪಾಯಿ) ಬಿಡ್ ಮಾಡಿದ್ದರು ನಂತರದ ಅವಧಿಯಲ್ಲಿ ಈ ಮೊತ್ತವನ್ನು ೨೭ ಶತಕೋಟಿ ಯೂರೋಗಳಿಗೆ (ಅಂದಾಜು ೧,೫೯,೩೦೦ ಕೋಟಿ ರೂಪಾಯಿ) ಏರಿಸಿದರು. ಅಂತಿಮವಾಗಿ ಒಪ್ಪಂದ ಏರ್ಪಡುವಾಗ ಮಿತ್ತಲ್ ಆರ್ಸೆಲರ್ ಷೇರುಗಳಿಗೆ ನೀಡಿದ ಒಟ್ಟು ಹಣ ೩೭,೭ ಶತಕೋಟಿ ಯೂರೋಗಳು(ಅಂದಾಜು ೨,೨೨,೪೩೦ ಕೋಟಿ ರೂಪಾಯಿ). ಜನವರಿ ತಿಂಗಳಲ್ಲಿ ಒಂದು ಆರ್ಸೆಲರ್ ಷೇರಿನ ಮೌಲ್ಯ ೨೩ ಯೂರೋ ಇದ್ದುದು ಈಗ ೪೦,೪ ಯೂರೋ ಆಗಿದೆ. ಈ ಒಪ್ಪಂದದ ಸುದ್ದಿ ಹರಡುತ್ತಿದ್ದಂತೆಯೇ ಆರ್ಸೆಲರ್ ಷೇರುಗಳ ಮೌಲ್ಯದಲ್ಲಿ ಶೇ ೬,೭ ರಷ್ಟು ವೃದ್ಧಿಯಾಗಿದೆ.

ಪರಿಣಾಮವಾಗಿ ಮಿತ್ತಲ್ ಪ್ರಸ್ತಾವನೆಯುನ್ನು ಶತಾಯುಗತಾಯು ವಿಫಲಗೊಳಿಸಬೇಕೆಂಬ ಗಯ್ ಡುಲ್ಲೆ ನೇತೃತ್ವದ ಆರ್ಸೆಲರ್ ಕಂಪನಿಯ ಒಂದು ಗುಂಪಿನ ಪ್ರಯತ್ನ ಕೊನೆಗೂ ಕೈಗೂಡಲಿಲ್ಲ. ಕೆಲವಾರಗಳ ಹಿಂದೆ ಷೇರುದಾರರಿಗೆ ಹೆಚ್ಚುವರಿ ಲಾಭಾಂಶದ ಆಮಿಷವನ್ನೂ ಒಡ್ಡಿದ್ದ ಡುಲ್ಲೆ ರಷ್ಯಾದ ಸರ್ವೆಸ್ಟಲ್ ಉಕ್ಕು ಕಂಪನಿಯಿಂದಲೂ ಪ್ರಸ್ತಾವನೆಯನ್ನೂ ಪಡೆದು ಅದರ ಪರವಾಗಿ ಎಲ್ಲಿಲ್ಲದ ಲಾಬಿ ನಡೆಸಿದ್ದರು. ಆದರೆ ಅಂತಿಮವಾಗಿ ಷೇರುದಾರರ ಒತ್ತಾಯಕ್ಕೆ ಮಣಿದ ಆರ್ಸೆಲರ್ ನಿರ್ದೇಶಕ ಮಂಡಳಿ ಸರ್ವೆಸ್ಟಲ್ ಕಂಪನಿಯ ಪ್ರಸ್ತಾವನೆಯನ್ನು ತಿರಸ್ಕರಿಸಿ ಮಿತ್ತಲ್ ಕಂಪನಿಯ ಪ್ರಸ್ತಾವನೆಗೆ ಮುದ್ರೆ ಒತ್ತಿತು. ಈಗ ಗಯ್ ಡುಲ್ಲೆ ಕಂಪನಿಯನ್ನೇ ಬಿಟ್ಟು ಹೋಗುತ್ತಿದ್ದಾರೆ.

ಈ ಎರಡೂ ಕಂಪನಿಗಳ ವಿಲೀನದಿಂದಾಗಿ ಜನ್ಮ ತಳೆಯಲಿರುವ 'ಆರ್ಸೆಲರ್-ಮಿತ್ತಲ್' ಕಂಪನಿ ಜಗತ್ತಿನ ಒಟ್ಟು ಉಕ್ಕು ಉತ್ಪಾದನೆಯ ಶೇ ೧೦ರಷ್ಟು ಪಾಲು ಹೊಂದಲಿದೆ. ತನ್ನ ಸಮೀಪದ ಪ್ರತಿಸ್ಪರ್ಧಿ ಜಪಾನ್‌ನ ನಿಪಾನ್ ಸ್ಟೀಲ್ ಕಂಪನಿಗಿಂತ ಮೂರು ಪಟ್ಟು ದೊಡ್ಡದಾಗಲಿದೆ. ವಾರ್ಷಿಕ ೧೧೬ದಶಲಕ್ಷ ಟನ್ ಉಕ್ಕು ಉತ್ಪಾದನೆ ಸಾಮರ್ಥ್ಯವನ್ನೂ ಮತ್ತು ೭೧.೯ ಶತಕೋಟಿ ಡಾಲರ್ ಆದಾಯವನ್ನೂ ಹೊಂದಲಿದೆ. ಈ ಕಂಪನಿಯ ಒಟ್ಟು ಉದ್ಯೋಗಿಗಳ ಸಂಖ್ಯೆ ೩ ಲಕ್ಷ ೨೦ ಸಾವಿರ

(ಸಾಭಾರ-ಪ್ರಜಾವಾಣಿ.)

***

ಸಾಮಾನ್ಯವಲ್ಲದ ಒಂದು ಚಿತ್ರದ ಕಥೆ

-ಮನೋರಮ ರತ್ನಾಕರ್.

ವಿಶ್ವದ ಅತ್ಯಂತ ದೊಡ್ಡದೂ ಸುಂದರವೂ ಆದ ಒಂದು ವರ್ಣಚಿತ್ರದ ವಿಚಿತ್ರ ಇತಿಹಾಸವಿದು. ನೀವು ನಂಬಿ ಅಥವಾ ಬಿಡಿ, ಅದರಲ್ಲಿ ಒಂದು ಬಾಗಿಲನ್ನೆ ಕುಯ್ಯಲಾಯಿತು ಅದರ ಮೂಲಕ ಗುಂಡುಗಳನ್ನು ಹಾರಿಸಲಾಯಿತು; ಕಲ್ಲುಗಳನ್ನೂ ಎಸೆಯಲಾಯಿತು. ಆದ್ದರಿಂದ ಅನೇಕ ಬಾರಿ ಆ ಚಿತ್ರವನ್ನು ತಿದ್ದಿ ಬರೆಯಲಾಯಿತು. ಎರಡನೇ ಮಹಾಯುದ್ಧದ ಒಂದು ಬಾಂಬ್ ಆ ಚಿತ್ರವನ್ನು ಬಹಳಷ್ಟು ಹಾನಿಗೊಳಿಸಿತು. ಸಮಯ ಕಳೆದಂತೆ ಅದು ಕಳೆಗುಂದಿತು. ಆದರೂ ಆ ಚಿತ್ರದ ಮೂಲ ಸಜೀವಿಕಾ ಭಾವವು ಇಂದಿಗೂ ಉಳಿದುಕೊಂಡು ಬಂದಿದೆ. ಆ ಚಿತ್ರ "ಕೊನೆಯ ಭೋಜನ" ಎಂಬುದು. ಅದನ್ನು ಬರೆದವ ಲಿಯಾನಾರ್ಡೊ ಡಾ ವಿಂಚಿ. ಆತ ವಿಶ್ವಕ್ಕೆ ಇದುವರೆಗೂ ಗೊತ್ತಿರದ ಮತ್ತು ವಿಶ್ವದ ಅತ್ಯಂತ ಶ್ರೇಷ್ಠ ಕಲಾಕಾರ. ಈ ಚಿತ್ರದ ಅಳತೆ ೧೫ X ೨೯ ಅಡಿ. ಇದನ್ನು ಮಿಲಾನ್‌ನಲ್ಲಿದ್ದ ಮತಪ್ರಚಾರಕರ ಭವನದ ಆಡಳಿತಾಧಿಕಾರಿ ಕಛೇರಿಯ ಗೋಡೆಯ ಮೇಲೇ ಬರೆಯಲಾಗಿತ್ತು. ಈ ಭವನವು ಸಾಂತ ಮರಿಯಾ ಡೆಲಾ ಗ್ರೇಜಿ (Santa Maria Delle Grazie) ಎಂದೂ ಪ್ರಸಿದ್ಧಿ ಪಡೆದಿದೆ. ಲಿಯಾನಾರ್ಡೊ ಈ ಚಿತ್ರವನ್ನು ೧೪೯೫ ರಲ್ಲಿ ಬರೆಯಲು ಪ್ರಾರಂಭಿಸಿ ೧೪೯೮ ರಲ್ಲಿ ಮುಗಿಸಿದ. ವರ್ಣಚಿತ್ರವೊಂದನ್ನು ಬರೆಯಲು ಇದು ಬಹು ದೀರ್ಘ ಸಮಯವೆ ಸರಿ. ಆದರೆ ಇದಕ್ಕೆ ಕಾರಣ ಲಿಯಾನಾರ್ಡೊ ಚಿತ್ರ ಬರೆಯಲು ಅನುಸರಿಸಿದ್ದ ವಿಶಿಷ್ಟ ಶೈಲಿ. ಆ ಕುರಿತಾದ ಓರ್ವ ಪ್ರತ್ಯಕ್ಷದರ್ಶಿಯ ವಿವರಣೆ ನಮ್ಮ ಬಳಿಯಿದೆ. ಅವನ ವರದಿಯ ಪ್ರಕಾರ ಲಿಯಾನಾರ್ಡೊ ನಾಲ್ಕು ದಿನಗಳ ಕಾಲ ಬಿಡುವಿಲ್ಲದೆಯೆ ಚಿತ್ರವನ್ನು ಬರೆಯುತ್ತಿದ್ದ. ಊಟ ಮಾಡಲು, ನೀರು ಕುಡಿಯಲು ಸಹ ವಿರಾಮ ತೆಗೆದುಕೊಳ್ಳುತ್ತಿರಲಿಲ್ಲ! ಆ ಮೇಲೆ ಚಿತ್ರ ಬರೆಯುವುದನ್ನು ನಿಲ್ಲಿಸಿ ಅನೇಕ ದಿನಗಳವರೆಗೆ ತಾನು ಬರೆದ ಚಿತ್ರದ ಬಗ್ಗೆ ವಿಮರ್ಶಾತ್ಮಕ ಅಧ್ಯಯನ ಕೈಗೊಳ್ಳುತ್ತಿದ್ದ. ಆ ಅಧ್ಯಯನದ ಕಾರಣದಿಂದಾಗಿ ಆ ಚಿತ್ರದಲ್ಲಿ ಸುಧಾರಣೆ ತರಲು ಒಂದೇ ಒಂದು ಬಾರಿ ಕುಂಚ ತಾಗಿಸುತ್ತಿದ್ದ. ಹಾಗೆ ಮಾಡಿದ ನಂತರ ಮತ್ತೆ ಚಿತ್ರ ಬರೆಯುವುದನ್ನು ನಿಲ್ಲಿಸಿ ಅನೇಕ ದಿನಗಳವರೆಗೆ ಕೆಲಸಕ್ಕೇ ಬರುತ್ತಿರಲಿಲ್ಲ. ಹಿಂದಿರುಗಿದ ನಂತರ ಕೆಲದಿನಗಳವರೆಗೆ ತನ್ನನ್ನು ಕೆಲಸದಲ್ಲಿ ಅವ್ಯಾಹತವಾಗಿ ತೊಡಗಿಸಿಕೊಳ್ಳುತ್ತಿದ್ದ. ನಂತರ ಪುನಃ ಕೆಲಸವನ್ನು ನಿಲ್ಲಿಸಿಬಿಡುತ್ತಿದ್ದ. ಹೀಗೆ ಪ್ರತಿಸಲವೂ

ಮಾಡುತ್ತಿದ್ದ. ಆ ಪ್ರದೇಶದ ಮುಖ್ಯಸ್ಥರು ಲಿಯಾನಾರ್ಡೋನ ಈ ಕಾರ್ಯಶೈಲಿಯಿಂದ ತಬ್ಬಿಬ್ಬಾದರು. ಅನೇಕ ಜನರು ಈ ವಿಶಿಷ್ಟ ಪ್ರಕಾರದ ಕಲಾಕಾರನು ಕೆಲಸಮಾಡುವುದನ್ನು ನೋಡಲು ಬರುತ್ತಿದ್ದರು. ನೋಡಿ ಮೂಕವಸ್ಮಿತರಾಗುತ್ತಿದ್ದರು. ಇಡೀ ನೆಲವೆಲ್ಲ ಬಣ್ಣಗಳಿಂದಲೂ ಇತರೆ ಪದಾರ್ಥಗಳಿಂದಲೂ ಅಸ್ತವ್ಯಸ್ತವಾಗಿರುತ್ತಿತ್ತು. ಇದರಿಂದಾಗಿ ಆ ಪ್ರದೇಶದ ಮುಖ್ಯಸ್ಥ ತನ್ನ ಸಹನೆಯನ್ನು ಕಳೆದುಕೊಂಡ. ಲಿಯಾನಾರ್ಡೋ ತನ್ನ ವಾಡಿಕೆಯ ಅಸಂಖ್ಯಾತ ಗೈರು ಹಾಜರಿಯ ನಂತರ ಬಂದಾದ ಮೇಲೆ, "ಈ ಕೆಲಸ ಮುಗಿಸಲು ಇನ್ನೂ ಎಷ್ಟು ಸಮಯ ಬೇಕೆಂದು" ಮುಖ್ಯಸ್ಥ ಕೇಳಿದ. ಆಗ ಲಿಯಾನಾರ್ಡೋ ಆ ಮುಖ್ಯಸ್ಥನಿಗೆ ತಾನು ಜುಡಾಸ್ ನನ್ನು ಚಿತ್ರಿಸಲು ಯೋಗ್ಯ ಮಾದರಿಯನ್ನು ಹುಡುಕುತ್ತಿರುವುದಾಗಿಯೂ ಈ ಕೆಲಸ ಸುಲಭವಲ್ಲವೆಂದೂ ತಿಳಿಸಿದ. ಒಂದು ವೇಳೆ ಅಂಥ ಮಾದರಿ ಸಿಗದಿದ್ದರೆ ಈಗ ತನಗೆ ತೊಂದರೆ ಕೊಡುತ್ತಿರುವ ವ್ಯಕ್ತಿಯ ಮುಖವನ್ನೇ ಮಾದರಿಯನ್ನಾಗಿ ಉಪಯೋಗಿಸಿಕೊಳ್ಳುವುದಾಗಿ ಹೇಳಿದ! ಮುಖ್ಯಸ್ಥನ ಮುಖ ಜುಡಾಸನ ಮುಖದೊಂದಿಗೆ ಬಹಳ ಯುಕ್ತವಾಗಿ ಹೊಂದಿಕೆಯಾಗುತ್ತಿತ್ತು. ಲಿಯಾನಾರ್ಡೋ ಜನರ ಮುಖಗಳನ್ನು ಚೆನ್ನಾಗಿ ಅಭ್ಯಸಿಸುತ್ತಿದ್ದ. ಈ ರೀತಿ ಅವನು ಅಭ್ಯಸಿಸಿದ ಅನೇಕ ಮುಖಗಳ ರೇಖೆಗಳು ಸಾವಿರಾರು ಇವೆ. ಆ ಎಲ್ಲ ರೇಖೆಗಳನ್ನೂ ಲಿಯಾನಾರ್ಡೋ ಬರೆದ ಟಿಪ್ಪಣಿಯನ್ನೂ ಕಾದಿಡಲಾಗಿದೆ. "ಕೊನೆ ಭೋಜನ"ದ ವರ್ಣಚಿತ್ರದ ಒಳ ಆಳ ಎಷ್ಟು ಅಧ್ಭುತವಾಗಿದೆಯೆಂದರೆ ಯಾವ ಕೋಣೆಯಲ್ಲಿ ಏಸು ಮತ್ತು ಅವನ ಶಿಷ್ಯರು ಊಟ ಮಾಡಿದರೊ ಅದು ಒಂದು ದೊಡ್ಡ ಕೋಣೆಯ ಭಾಗವಾಗಿರುವಂತೆ ಭಾಸವಾಗುತ್ತದೆ. ಅಲ್ಲಿ ಊಟ ಮಾಡುವ ಜನರಿಗೆ ತಾವು ಸಹ ಮೇಲ್ಭಾಗದ ಕೋಣೆಯಲ್ಲಿ ಏಸು ಮತ್ತು ಅವನ ಶಿಷ್ಯರೊಂದಿಗೆ ಊಟ ಮಾಡುತ್ತಿರುವ ಅನುಭವವಾಗುತ್ತಿರುವಂತೆ ತೋರುತ್ತದೆ. ೧೬೫೨ ರಲ್ಲಿ ವರ್ಣಚಿತ್ರವು ಸಂಪೂರ್ಣವಾಗಿ ಹಾಳಾಗಿದೆಯೆಂದು ಪರಿಗಣಿಸಲಾಯಿತು. ಮತ್ತು ಚಿತ್ರದಲ್ಲಿಯ ಭವನದ ಒಂದು ಬಾಗಿಲನ್ನು ವಿಸ್ತರಿಸಲಾಯಿತು ಆಗ ಏಸುನ ಕಾಲು ಇದ್ದ ಸ್ಥಳವೆ ಮೋಟಕಾಯಿತು.

೧೭೨೬ ರಲ್ಲಿ ಆ ವರ್ಣಚಿತ್ರದ ಬಣ್ಣ ಉದುರುತ್ತಿದ್ದುದರಿಂದ ಬಣ್ಣವನ್ನು ಪುನಃ ಸುಸ್ಥಿತಿಗೆ ತರುವುದಕ್ಕಾಗಿ ಆರು ಸಲ ಪ್ರಯತ್ನ ಮಾಡಲಾಯಿತು. ಆದರೆ ಆ ಕಾರ್ಯದಿಂದಾಗಿ ಚಿತ್ರಕ್ಕೆ ಇನ್ನೂ ಹೆಚ್ಚು ಹಾನಿಯೇ ಆಯಿತು. ಚಿತ್ರವು ಹೆಚ್ಚು ಕಪ್ಪಗೂ, ಮಸುಕಾಗಿಯೂ ಆಯಿತು. ೧೭೬೮ ರಲ್ಲಿ ಆ ಚಿತ್ರವನ್ನು ರಕ್ಷಿಸುವುದಕ್ಕಾಗಿ ಒಂದು ತೆರೆಯನ್ನು ಹಾಕಲಾಯಿತು. ಆದರೆ ಈ ತೆರೆಯಿಂದಾಗಿ ಬಣ್ಣದ ಉದುರುವಿಕೆ ಇನ್ನೂ ಹೆಚ್ಚಾಯಿತು. ಶೀತ ವಾತಾವರಣವು ಚಿತ್ರವನ್ನು ಕ್ರಮೇಣ ಇನ್ನೂ ಹೆಚ್ಚು ಹಾಳು ಮಾಡಿತು.

೧೭೭೦ ರಲ್ಲಿ ಬೇರೆ ಓರ್ವ ಕಲಾಕಾರನನ್ನು ಗೊತ್ತು ಮಾಡಿ ವರ್ಣಚಿತ್ರದ ಮೇಲಿದ್ದ ಹೆಚ್ಚುವರಿ ವರ್ಣವನ್ನು ತೆಗೆದುಹಾಕಬೇಕೆಂದು ಅವನಿಗೆ ಹೇಳಲಾಯಿತು. ಹೀಗೆ ಮಾಡುವಾಗ ಮೂಲಚಿತ್ರದ ಬಹಳಷ್ಟು ಅಂಶವು ನಾಶವಾಯಿತು. ೧೭೯೬ ರಲ್ಲಿ ನೆಪೋಲಿಯನ್‌ನ ಸೈನ್ಯ ಆ ಚಿತ್ರವಿದ್ದ ಪಡಸಾಲೆಯನ್ನು ಶಸ್ತ್ರಾಸ್ತ್ರಗಳ ಉಗ್ರಾಣವನ್ನಾಗಿ ಉಪಯೋಗಿಸಿಕೊಂಡಿತು. ಆ ವರ್ಣಚಿತ್ರದಲ್ಲಿಯ ಚಿತ್ರಗಳಿಗೆ ಸೈನಿಕರು ಗುಂಡಿಕ್ಕಿದರು, ಕಲ್ಲುಗಳನ್ನು ಸಹ ಎಸೆದರು. ಇಷ್ಟೆ ಅಲ್ಲ, ಏಣಿಯನ್ನು ಹತ್ತಿ ಚಿತ್ರದ ಕಣ್ಣುಗಳ ಮೇಲೆ ಗೀಚಿದರು. ಹೀಗೆ ಆಗಬಹುದೆಂದು ನೀವು ಊಹಿಸಲು ಸಾಧ್ಯವೇ? ೧೯೪೩ ರಲ್ಲಿ ಎರಡನೆ ಮಹಾಯುದ್ಧದ ಬಾಂಬ್‌ವೊಂದು ವರ್ಣಚಿತ್ರವಿದ್ದ ಕಟ್ಟಡವನ್ನು ನಾಶಮಾಡಿತು. ಆದರೆ ಅದೃಷ್ಟವಶಾತ್ ಆ ವರ್ಣಚಿತ್ರಕ್ಕೆ ಯಾವ ಹಾನಿಯೂ ಸಂಭವಿಸಲಿಲ್ಲ. ಇತ್ತೀಚಿಗೆ ಆ ಪ್ರದೇಶದ ಅಧಿಪತಿ "ಮನುಷ್ಯನಿಗಿಂತ ಬಾಂಬಿಗೆ ಹೆಚ್ಚು ಬುದ್ಧಿ ಇರುವಂತೆ ತೋರುತ್ತದೆಂಬುದಾಗಿ ಉದ್ಗರಿಸಿದ".

ಆಧುನಿಕ ತಂತ್ರಜ್ಞಾನವನ್ನು ಉಪಯೋಗಿಸಿಕೊಂಡು ಆ ವರ್ಣಚಿತ್ರವನ್ನು ಮೊದಲಿನಂತೆಯೆ ಮಾಡುವ ಕೆಲಸವು ಈಗ ೧೯೭೧ ರಿಂದ ಪ್ರಾರಂಭವಾಗಿದೆ. ಈ ಕೆಲಸವನ್ನು ಬಹು ತಾಳ್ಮೆಯಿಂದ ಮತ್ತು ಬಹು ಕುಶಲತೆಯಿಂದ ಡಾ॥ ಬ್ರಿಂಬಿಲ ಕೈಗೊಂಡಿದ್ದಾರೆ. ಇವರು ಉನ್ನತ ಶಿಕ್ಷಣವನ್ನು ಹೊಂದಿದಂಥವರಾಗಿದ್ದಾರೆ. ಆ ವರ್ಣಚಿತ್ರದ ಒಂದೊಂದು ಅಂಗುಲವನ್ನೂ ಕರಾರುವಕ್ಕಾದ ಉಪಕರಣಗಳ ಸಹಾಯದಿಂದಲೂ ಅನೇಕ ವರ್ಷಗಳ ಪರಿಶ್ರಮದಿಂದಲೂ ವರ್ಣಚಿತ್ರವನ್ನು ಮೊದಲಿನ ರೂಪಕ್ಕೆ ತಂದಿದ್ದಾರೆ. ಲಿಯಾನಾರ್ಡೊರ ವರ್ಣಚಿತ್ರದ ಮೇಲಿದ್ದ ಐದು ಶತಮಾನಗಳ ಧೂಳು, ಕಶ್ಮಲ ಮತ್ತು ಮೇಲ್ಪದರವನ್ನು ತೆಗೆದುಹಾಕಿ ಆ ಚಿತ್ರವು ಪ್ರಕಾಶಕ್ಕೆ ಬರುವಂತೆ ಬ್ರಿಂಬಿಲ ಮಾಡಿದ್ದಾರೆ, ಮೂಲ ಕೃತಿಯ ಬಹಳಷ್ಟು ಚೂರುಗಳು ಹಾಳಾಗಿ ಹೋಗಿದ್ದರೂ ಸಹ ಲಿಯಾನಾರ್ಡೊ ಉಪಯೋಗಿಸಿದ್ದ ಬಹು ಆಕರ್ಷಕ ವರ್ಣಗಳನ್ನು ಈಗ ನೋಡಬಹುದಾಗಿದೆ. ಏಸುವಿನ ಪ್ರತಿಯೊಬ್ಬ ಶಿಷ್ಯನ ಚರ್ಯೆಯನ್ನು ಆ ಚಿತ್ರವು ಬಿಂಬಿಸುತ್ತದೆ. ಆ ಚಿತ್ರದ ಇಡೀ ಕಲ್ಪನೆ ಅದರ ಎಲ್ಲ ಆಯಾಮಗಳೊಂದಿಗೆ ಮತ್ತು ತೀವ್ರ ಭಾವನೆಗಳೊಂದಿಗೆ ಪ್ರಕಾಶಗೊಂಡಿದೆ. ಸಮಯದ ದಾಳಿಯಿಂದಾಗಿ ಏಸುವಿನ ರೂಪವನ್ನು ಕಲಾಕಾರನು ಹೇಗೆ ಕಲ್ಪಿಸಿಕೊಂಡಿದ್ದನೆಂಬುದನ್ನು ನಾವು ಎಂದಿಗೂ ತಿಳಿಯಲಾರದವರಾಗಿದ್ದರೂ ಏಸುವಿನ ಜೀವನದ ಬಹು ತೀವ್ರತಮವಾದ ಭಾವನಾತ್ಮಕ ಪರಿಣಾಮವನ್ನು ಈಗಲೂ ಅನುಭವಿಸಬಹುದಾಗಿದೆ. ಆ ಘಳಿಗೆ ಬಹು ಮಹತ್ವದ್ದಾಗಿದೆ. ಏಕೆಂದರೆ ತನ್ನೊಂದಿಗೆ ಸಹಭೋಜನ ಮಾಡುತ್ತಿರುರುವ ಒಬ್ಬ ವ್ಯಕ್ತಿಯು ತನಗೆ ದ್ರೋಹ ಮಾಡುತ್ತಾನೆಂದು ಏಸು ಹೇಳಿದಂಥ ಘಳಿಗೆ ಅದಾಗಿತ್ತು. ಏಸು ಹೀಗೆ ಅನಿರೀಕ್ಷಿತ

ಮತ್ತು ಆಘಾತಕಾರಿಯಾದ ಮಾತನ್ನು ಹೇಳುತ್ತಿರುವಾಗ ಏಸುವಿನ ಶಿಷ್ಯರು ಯಾವ ರೀತಿ ಪ್ರತಿಕ್ರಿಯಿಸುತ್ತಿದ್ದರೆಂಬುದನ್ನು ಈ ಚಿತ್ರವು ತೋರಿಸುತ್ತದೆ. "ಆ ವ್ಯಕ್ತಿ ನಾನೆ ಸ್ವಾಮಿ? ನಾನೆ ಸ್ವಾಮಿ?" ಎಂದು ಪ್ರತಿಯೊಬ್ಬ ಶಿಷ್ಯ ಅನುಮಾನದಿಂದ ಏಸುವನ್ನು ಕೇಳುತ್ತಾರೆ. ಏಸುನ ಬಲಪಕ್ಕದಲ್ಲಿ ಕುಳಿತಿದ್ದ ಜಾನ್ ನನ್ನು ಆ ದ್ರೋಹಿ ಯಾರೆಂದು ಪೀಟರ್ ಏಸುವನ್ನು ಕೇಳುತ್ತಾನೆ. ಜಾನ್ ಈ ಸಂಭಾಷಣೆಯನ್ನು ಗಮನವಿಟ್ಟು ಕೇಳುತ್ತಿರುವ ಮನೋಭಾವದವನಂತೆ ನಮಗೆ ಕಾಣುತ್ತದೆ. ಟೆಬಲ್ ಮೇಲೆ ಮೊಣಕೈ ಊರಿ ಬಗ್ಗಿ ಕುಳತವನೇ ಜುಡಾಸ್. ಅವನ ಮುಖದ ಮೇಲೆ ಅಪರಾಧಿ ಮನೋಭಾವದ ಛಾಯೆಯಿದೆ. ಮಧ್ಯದಲ್ಲಿ ಏಸು ಒಬ್ಬಂಟಿಗನಾಗಿ ಕುಳಿತದ್ದು ಕಾಣುತ್ತದೆ. ಕೆಲವರು ಈ ರೂಪಕ ಲಿಯಾನಾರ್ಡೋನ ಒಂಟಿತನವನ್ನು ತೋರಿಸುತ್ತದೆಂದು ಸಹ ಹೇಳುತ್ತಾರೆ. ಏಕೆಂದರೆ ತನ್ನ ವಿಚಾರಗಳನ್ನು ಹಂಚಿಕೊಳ್ಳಬಹುದಾದಂಥ ಸಮಾನ ಮನಸ್ಕರನ್ನು ಲಿಯಾನಾರ್ಡೊ ಹೊಂದಿರಲಿಲ್ಲ. ಏಕೆಂದರೆ ಅವನ ವಿಚಾರಗಳು ಶತಮಾನಗಳನ್ನು ಮೀರಿದ ಮುನ್ನೋಟದವಾಗಿದ್ದವು.

ಇತ್ತೀಚಿಗೆ ಆ ವರ್ಣಚಿತ್ರದ ಬಗ್ಗೆ ವಿವಾದ ಉಂಟಾಗಿದೆ. ಡಾನ್ ಬ್ರೌನ್ ಎಂಬುವವರು ತನ್ನ ಡಾವಿಂಚಿ ಕೋಡ್ ಎಂಬ ಪುಸ್ತಕದಲ್ಲಿ ಕಲಾಕಾರ ಲಿಯಾನಾರ್ಡೊ ಡಾ ವಿಂಚಿ ಮತ್ತು ಅವನ ಮುಖ್ಯ ವಿಷಯದ ಬಗ್ಗೆ ಸಂಶಯಗಳನ್ನು ವ್ಯಕ್ತಪಡಿಸಿದ್ದಾರೆ. ಅದೇ ರೀತಿ "ಕೊನೆ ಭೋಜನದ" ಜೀಸಸ್ ಕ್ರೈಸ್ಟ್ ನ ಬಗ್ಗೆಯೂ ಕೂಡ ಸಂಶಯ ವ್ಯಕ್ತಪಡಿಸಿದ್ದಾರೆ. ನಿಮಗೆ ಗೊತ್ತಿರುವಂತೆ ಸತ್ಯಕ್ಕೆ ಜಯ ಸಿಗುತ್ತದೆ. ಇಂದು ನೀವು ಮಿಲಾನ್‌ಗೆ ಹೋದಲ್ಲಿ ಮತ್ತು ಈ ವರ್ಣಚಿತ್ರವನ್ನು ನೋಡಿದರೆ ಲಿಯಾನಾರ್ಡೊ ಡಾ ವಿಂಚಿ ಯಾವ ತೀವ್ರತಮವಾದ ಭಾವನೆಯಿಂದ ಆ ಚಿತ್ರವನ್ನು ಬರೆದನೊ ಅದು ನಿಮ್ಮ ಅನುಭವಕ್ಕೆ ಸ್ವಯಂಸಿದ್ಧವಾಗಿ ವ್ಯಕ್ತವಾಗುತ್ತದೆ ಮತ್ತು ನೀವು ಮಾನಸಿಕವಾಗಿ ಬಹಳಷ್ಟು ಚೇತೋಹಾರಿಯಾದ ಅನುಭವಕ್ಕೆ ಬರುತ್ತೀರಿ.

ಸಾಭಾರ–ಡೆಕ್ಕನ್ ಹೆರಾಲ್ಡ್
ಅನು– ಸು.ಕೌ.

ಸಮಾಜವಾದಿಯ ಕನಸಿನ ಮೇಲೆ ಬೆಳಕು

–ರಾಮಚಂದ್ರ ದೇವ

ಹೀಗೆ, ನಾಡು ಕುದಿಯುತ್ತಿದ್ದಾಗ ಗಾಂಧೀಜಿ ಸಂಘಟಿಸಿದ ಚಳವಳಿಯ ಬುನಾದಿ ಆಗಿದ್ದದ್ದು ನಮ್ಮ ಸಾಮಾನ್ಯರೆಂದು ಪರಿಗಣಿಸಲಾದ ಜನರ ತಿಳುವಳಿಕೆ, ಬುದ್ಧಿಶಕ್ತಿ, ಹಾಗೂ ನೈತಿಕತೆ. ಸರಳ ಜೀವನವನ್ನು ಒಪ್ಪಿಕೊಂಡಿದ್ದ ಜನ ದುಬಾರಿ ಇಂಗ್ಲಿಷ್ ವಸ್ತ್ರಗಳನ್ನು ಸುಟ್ಟರು. ದೊಡ್ಡ ಬಂಗಲೆ, ಹೆಚ್ಚು ಸಂಬಳದ ನೌಕರಿ, ಐಷಾರಾಮ ಜೀವನಕ್ರಮ ತ್ಯಜಿಸಿದರು. ಸರಳತೆ, ವಿಚಾರವಂತಿಕೆ ನಮ್ಮ ಜನರಲ್ಲಿ ಈಗಲೂ ಜೀವಂತವಾಗಿದೆ. ಇತ್ತೀಚಿನ ಸುನಾಮಿ ದುರಂತದಲ್ಲಿ ಮಗನನ್ನು ಕಳೆದುಕೊಂಡ ಒಬ್ಬರಿಗೆ ಒಂದು ಲಕ್ಷ ಪರಿಹಾರ ಸಿಕ್ಕಿತು. ಅದಾದ ಕೆಲವು ದಿನಕ್ಕೆ ಮಗ ವಾಪಸ್ಸು ಬಂದಾಗ ಹೆತ್ತವರು ತಾವಾಗಿ ಸಿಕ್ಕ ಪರಿಹಾರ ಧನವನ್ನು ಸರ್ಕಾರಕ್ಕೆ ಹಿಂದಿರುಗಿಸಿದರು. ಸುನಾಮಿಯನ್ನೇ ನೆಪಮಾಡಿಕೊಂಡು ಲಕ್ಷಗಟ್ಟಲೆ ಹೊಡೆಯುವ ಅಧಿಕಾರಿ, ರಾಜಕಾರಣಿಗಳ ಮಧ್ಯೆ ಸಾಮಾನ್ಯ ಜನ ತೋರಿಸಿದ ಸ್ವಾಭಿಮಾನ, ನೈತಿಕತೆ ಎದ್ದು ಕಾಣುತ್ತದೆ. ಇಂಥಾ ವ್ಯಕ್ತಿತ್ವದ ವ್ಯಾಪಕ ಬೆಳವಣಿಗೆ ಸಮಾಜವಾದಿಯ ಕನಸು.

ನನ್ನ ಮನೆಗೊಬ್ಬ ಕೆಲಸದವ ಬರುತ್ತಾನೆ. ಹರಿಜನ. ಅವನ ಮನೆ ಸುಮಾರು ಮೂರು ಮೈಲಿ ದೂರದಲ್ಲಿದೆ. ನನ್ನ ಮನೆಯಿಂದ ಅರ್ಧಮೈಲಿ ದೂರದಲ್ಲಿ ಸರ್ಕಾರ ಕಟ್ಟಿಸಿದ ಒಂದು ಮನೆ ಖಾಲಿಯಿದೆ. ಅದು ನಿನಗೆ ಸಿಗುವಂತೆ ಮಾಡುತ್ತೇನೆ ಎಂದೆ. ತನಗೆ ಈಗಾಗಲೇ ಒಂದು ಎಕರೆ ಜಾಗ ಮತ್ತು ಮನೆ ಇರುವುದಾಗಿಯೂ ಆ ಸರ್ಕಾರಿ ಮನೆಯನ್ನು ಮನೆಯಿಲ್ಲದ ಬೇರೆಯಾರಿಗಾದರೂ ಕೊಡಿಸಬೇಕೆಂದೂ ಹೇಳಿದ. ಎರಡೆರಡು ಬಂಗಲೆ, ಸೈಟುಗಳನ್ನು ಲಂಚ ಹೊಡೆದ ದುಡ್ಡಿನಲ್ಲಿ ಜನ ಮಾಡಿಕೊಳ್ಳತ್ತಾತರೆಂಬುದನ್ನು ಅವನು ತಿಳಿದವನಲ್ಲ. ಆದರೂ ಯುವಕನಾದ, ಹತ್ತು ವರ್ಷದ ಒಳಗಿನ ಎರಡು ಶಾಲೆಗೆ ಹೋಗುವ ಮಕ್ಕಳಿರುವ, ಯಾವಾಗಲೂ ಹಣಕ್ಕಾಗಿ ಪರದಾಡುವ ಅವನಿಗೆ ಹಾಗನ್ನಿಸಿತು. ಇಂಥಾ ಸ್ವಾಭಿಮಾನದ, ನ್ಯಾಯಾನ್ಯಾಯ ವಿವೇಚನೆಯ ಬೆಳವಣಿಗೆಯೂ ಸಮಾಜವಾದಿ ಕಂಡ ಕನಸು.

ಉಳ್ಳವರು ಶಿವಾಲಯ ಮಾಡುತ್ತಾರೆ. ಶಿವಾಲಯದಲ್ಲಿ ಅಥವಾ ದೇವಸ್ಥಾನದಲ್ಲಿ ದೇವರ ಪ್ರತಿಮೆಗಳು, ಪುರೋಹಿತರು, ಪೂಜೆ ಪುನಸ್ಕಾರಗಳು, ಭಕ್ತರು ಇರುತ್ತಾರೆ. ಹಣ್ಣುಕಾಯಿ ಅಂಗಡಿ, ಹೂವಿನ ಅಂಗಡಿ, ಚಪ್ಪಲಿ ನೋಡಿಕೊಳ್ಳಲು ಜನ ಇರುತ್ತಾರೆ. ಜೊತೆಗೆ ಪ್ರತಿ ದೇವಸ್ಥಾನದ, ಪ್ರತಿ ಮಠದ,

ಪ್ರತಿ ಮಸೀದಿ, ಚರ್ಚು, ಗರುದ್ವಾರದ ಎದುರು ಒಂದು ಭಿಕ್ಷುಕರ ಪಡೆಯೂ ಕೂತಿರುತ್ತದೆ. ಆದರೆ ಕಾಲೇ ಕಂಬವಾಗಿ, ದೇಹವೇ ದೇಗುಲವಾಗಿ, ಶಿರವೇ ಹೊನ್ನ ಕಳಸವಾದರೆ, ಬಡವ ಶ್ರೀಮಂತ ಎಂಬ ಭೇದವಿಲ್ಲ. ಭಿಕ್ಷುಕರೂ ಇಲ್ಲ. ಪ್ರತಿಯೊಬ್ಬ ಇನ್ನೊಬ್ಬನಿಗೆ ಸಮಾನ. ಹೀಗಾದಾಗ ನೈತಿಕ ನರಕದಲ್ಲಿ ಬಿದ್ದಿರುವ ಜಾರ್ಜ್‌ಬುಷ್‌ನಂಥಾ ರಾಕ್ಷಸರು ಸುನಾಮಿ ಸಂತ್ರಸ್ತ ತಂದೆ ತಾಯಿಯರ ಅಥವಾ ನನ್ನ ಮನೆ ಕೆಲಸದ ಹರಿಜನನ ನೈತಿಕ ಮಟ್ಟಕ್ಕೆ ಏರುತ್ತಾರೆ. ಇದೂ ಸಮಾಜವಾದಿಯ ಕನಸು.

ಇದು ಸಾಹಿತ್ಯದ ಕನಸೂ ಹೌದು. ಶಿವರಾಮ ಕಾರಂತ, ಕುವೆಂಪು, ಅಡಿಗ, ಮಾಸ್ತಿ, ಬೇಂದ್ರೆ. ಶ್ರೀರಂಗ. ಪುರಂದರದಾಸರು ಮದಲಾದ ನಮ್ಮ ಎಲ್ಲಾ ದೊಡ್ಡ ಲೇಖಕರು ಸಮಾಜದ, ವ್ಯಕ್ತಿಯ ಹುಳುಕುಗಳನ್ನು ತೋರಿಸುತ್ತಲೇ ನಮ್ಮ ಸಾಮಾನ್ಯರಲ್ಲಿರುವ ಅಸಾಮಾನ್ಯ ಗುಣವನ್ನೂ ಎತ್ತಿ ಹಿಡಿದಿದ್ದಾರೆ. ಆದ್ದರಿಂದಲೇ ಸಾಹಿತ್ಯ ಗ್ಲೋಬಲೈಸೇಷನ್ನಿನ, ಜಾತೀಯತೆಯ ಅಥವಾ ಇನ್ನಾವುದೇ ದಾಳಿಯನ್ನು ಪ್ರತಿರೋಧಿಸುವ ಸಂವೇದನೆ ಬೆಳೆಸುವ ಶಕ್ತಿಯಾಗಿದೆ. ಆದರೆ ಸಾಹಿತ್ಯದ ಈ ಪ್ರತಿರೋಧ ಗುಣವನ್ನು ಜನರಿಗೆ ತಿಳಿಸುವ ಪ್ರಚಾರದ ಕೆಲಸವನ್ನು ಮಾತ್ರ ನಾವು ಸರಿಯಾಗಿ ಮಾಡುತ್ತಿಲ್ಲ ಎನ್ನಿಸುತ್ತದೆ. ಬಹುಷಃ ಸಾಹಿತ್ಯಕ ಎನೆಕ್ಡೋಟ್‌ಗಳ ಬದಲು ಸಾಹಿತ್ಯ ಕೃತಿಗಳ ಚರ್ಚೆಯನ್ನು ಹೆಚ್ಚಾಗಿಮಾಡಿದರೆ ಇದನ್ನು ಸಾಧಿಸಲು ಸಾಧ್ಯವಾದೀತು. ಶ್ರೇಷ್ಠ ಸಾಹಿತ್ಯ ಜನರ ಮನಸ್ಸಿನೊಳಗೆ ಬೆರೆತು ಹೋಗಬೇಕು ಎನ್ನುವುದೂ ಸಮಾಜವಾದಿಯ ಕನಸು.

[೧೯ ಮಾರ್ಚ್ ೨೦೦೬ ರಂದು ಮೈಸೂರಿನಲ್ಲಿ ನಡೆದ ದೇವಸಾಹಿತ್ಯ ಪುಸ್ತಕದ ಬಿಡುಗಡೆ ಸಮಾರಂಭದಲ್ಲಿ ಓದಿದ ಲೇಖನದ ಆಯ್ದ ಭಾಗ.]

–(ಸಾಭಾರ-ಸಂಕಲನ)

ಅಸ್ಪೃಶ್ಯತಾ ನಿವಾರಣೆಯ ಹಗ್ಗಜಗ್ಗಾಟ ಒಂದು ಆಲೋಚನೆ

-ಎಲ್. ನರಸಿಂಹಯ್ಯ ತೊಂಡೋಟಿ

"ಸ್ಪೃಶ್ಯಾಸ್ಪೃಶ್ಯರನ್ನು ಕಾನೂನಿನ ಮೂಲಕ ಒಂದುಗೂಡಿಸುವ ಪ್ರಯತ್ನ ಸಾಹಸದ ಮಾತಾದೀತು. ಅವರ ಒಂದುಗೂ ಡುವಿಕೆಗೆ ಪ್ರೀತಿಯೊಂದೇ ಪರಿವರ್ತನೆಯ ಸಾಧನವಾಗಬೇಕು."

(ಡಾ॥ ಅಂಬೇಡ್ಕರ್ ಅಸ್ಪೃಶ್ಯತಾ ನಿಮೂಲನಾ ಸಮಿತಿ ಕಾರ್ಯದರ್ಶಿ ಶ್ರೀ ಥಕ್ಕರ್ ಬಾಪಾ ಅವರಿಗೆ ಬರೆದ ಪತ್ರದಲ್ಲಿ)

ಅಸ್ಪೃಶ್ಯತೆ, ಭಾರತೀಯ ಜನಜೀವನಕ್ಕೆ, ಇಲ್ಲಿನ ಧಾರ್ಮಿಕ ವ್ಯವಸ್ಥೆಗೆ ಅಂಟಿ ಬಂದಿರುವ ಘೋರವಾದ ಕಳಂಕ. ಈ ಕಳಂಕದಿಂದ ಮುಕ್ತವಾದ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಗಳನ್ನು ಸ್ಥಾಪಿಸಲು ಬುದ್ಧ-ಬಸವರು ಕ್ರಮವಾಗಿ ೨೫೦೦ ಮತ್ತು ೮೦೦ ವರ್ಷಗಳ ಹಿಂದೆಯೇ ಪ್ರಯತ್ನಿಸಿದರು. ಆನಂತರದಲ್ಲಿ ಬಂದ ಸಂತರು, ಸಮಾಜ ಸುಧಾರಕರು ಮತ್ತು ಹಿತೈಷಿಗಳು ತಮ್ಮ ತಮ್ಮ ರೀತಿಯಲ್ಲಿ ಪ್ರಯತ್ನಿಸುತ್ತಾ ಬಂದಿದ್ದಾರೆ. ಆದರೂ ೧೯ ನೇ ಶತಮಾನದ ಕೊನೆಯ ವೇಳೆಗೆ, ಇದ್ದ ಪರಿಸ್ಥಿತಿಯಲ್ಲಿ ಸುಧಾರಣೆಯಾಗಿರಲಿಲ್ಲವೆಂಬುದು ಗಾಂಧಿಯವರ ಮತ್ತು ಡಾ॥ ಅಂಬೇಡ್ಕರ್ ಅವರ ಮನಃಸ್ಥಿತಿ ಮತ್ತು ಪ್ರಯತ್ನಗಳಿಂದ ಸ್ಪಷ್ಟವಾಗುತ್ತದೆ.

ತಮ್ಮ ಮನೆಯಲ್ಲಿ ಭಂಗಿ ಕೆಲಸವನ್ನು ಮಾಡುತ್ತಿದ್ದ ಮೆಹರ್ ಜಾತಿಯ ಉಕಾನನ್ನು ಮುಟ್ಟುವುದರಿಂದಲೇ ತಾನು ಭ್ರಷ್ಟನಾಗುವುದಾದರೂ ಹೇಗೆಂದು ಗಾಂಧಿಯ ಎಳೇ ಮನಸ್ಸು ತಾಯಿ ಪುತಲೀಬಾಯಿಯನ್ನು ಪ್ರಶ್ನಿಸಿತು.

ಪ್ರಿಟೋರಿಯಾ ಹೋಟೆಲಿನಲ್ಲಿ ಹಾಗೆಯೇ ಆಫ್ರಿಕದ ಕ್ಷೌರಿಕನ ಅಂಗಡಿಯಲ್ಲಿ ತಮಗಾದ ಕಹಿ ಅನುಭವದೊಂದಿಗೆ ಭಾರತದಲ್ಲಿದ್ದ ಅಸ್ಪೃಶ್ಯ ಸಹೋದರರ ಹೀನಾವಸ್ಥೆಯನ್ನು ಸಮೀಕರಿಸಿಕೊಂಡರು.

ಸ್ವಚ್ಛತಾ (ಭಂಗಿ) ಕಾರ್ಯವನ್ನು ಮಾಡುವ ಸಂಬಂಧ ಪ್ರತಿರೋಧ ವ್ಯಕ್ತಪಡಿಸಿದ ತಮ್ಮ ಹೆಂಡತಿ ಕಸ್ತೂರಿ ಬಾ ಅವರನ್ನು ಥಳಿಸಿ ಹೊರ ಹಾಕಿದರು.

ಸತ್ಯಾಗ್ರಹ ಆಶ್ರಮಕ್ಕೆ ಅಸ್ಪೃಶ್ಯ ಕುಟುಂಬವನ್ನು ಸೇರಿಸಿಕೊಂಡ ಒಂದೇ ಕಾರಣಕ್ಕಾಗಿ ಸಾಮಾಜಿಕ ಬಹಿಷ್ಕಾರ ಮತ್ತು ಆರ್ಥಿಕ ಮುಗ್ಗಟ್ಟುಗಳನ್ನು ಅನುಭವಿಸಿದರು.

ಅಸ್ಪೃಶ್ಯತಾ ನಿವಾರಣಾಂದೋಲನಕ್ಕೆ ರಾಷ್ಟ್ರವ್ಯಾಪಿ ಸ್ವರೂಪ ನೀಡುವುದಕ್ಕಾಗಿ, ರಚನಾತ್ಮಕ ಕಾರ್ಯಗಳಲ್ಲಿ ಒಂದನ್ನಾಗಿ ಅದನ್ನೂ ಅಳವಡಿಸಿದರು. ಹರಿಜನ ಕೇರಿಗಳಿಗೆ ಭೇಟಿ, ಅಂತರ ಜಾತಿ ವಿವಾಹಗಳನ್ನು ಪ್ರಾರಂಭಿಸಿದರು.

ಅಸ್ಪೃಶ್ಯರಿಗೆ ಪ್ರವೇಶ ನೀಡಲು ನಿರಾಕರಿಸಿದ ದೇವ ಮಂದಿರಗಳಿಗೆ ತಾವು ಪ್ರವೇಶಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು.

ಭಂಗಿಯಾಗಿ, ಝಾಡ ಮಾಲಿಯಾಗಿ ಸಾಯುವುದರಲ್ಲಿ ತನಗೆ ತೃಪ್ತಿಯಿದೆ, ಅಸ್ಪೃಶ್ಯರಿಗೆ ಬಹಿಷ್ಕಾರ ಹಾಕುವುದಾದರೆ ಅವರ ಜೊತೆಯಲ್ಲಿ ತನಗೂ ಬಹಿಷ್ಕಾರ ಹಾಕಿರೆಂದು ಸಂಪ್ರದಾಯಸ್ಥರಿಗೆ ಸವಾಲು ಹಾಕಿದರು.

ವಯಸ್ಸಿನಿಂದ ಸುಮಾರು ಎರಡು ದಶಕಗಳಷ್ಟು ಚಿಕ್ಕವರಾದ ಅಂಬೇಡ್ಕರ್ ಅವರು ಅಸ್ಪೃಶ್ಯರಾಗಿಯೇ ಹುಟ್ಟಿದವರು. "ದೀನ-ದಲಿತರಿಗೆ ತಾರಕ ಶಕ್ತಿಯಾಗುತ್ತಾನೆ, ರಾಷ್ಟ್ರಕ್ಕೆ ಜ್ಯೋತಿಯಾಗುತ್ತಾನೆ" ಎಂದು ಮುನ್ನುಡಿದಿದ್ದ ವೈರಾಗ್ಯ ಮೂರ್ತಿಯೊಬ್ಬರ ಭವಿಷ್ಯ ವರ್ತಮಾನವಾದಂತೆ, ಸಮಾಜದ ಅನಿಷ್ಟ ಕಾಲ್ತುಳಿತಕ್ಕೆ ಸಿಕ್ಕಿಮೂಕವೇದನೆ ಪಡುತ್ತಿದ್ದ ಕೋಟ್ಯಾನು ಕೋಟಿ ಮುಗ್ಧರಿಗೆ ಬೆನ್ನೆಲುಬಾದಂತೆ, ಧ್ವನಿಯಾದಂತೆ ಅಂಬೇಡ್ಕರ್ ಸಂಜನಿಸಿದರು. ಆ ಕಿಶೋರನ ಕಣ್ಣು ಮನಸ್ಸುಗಳು ತಾರುಣ್ಯಾವಸ್ಥೆಗೆ ಬರುತ್ತಿದ್ದಂತೆ ತಾನು ಅಸ್ಪೃಶ್ಯ, ತನ್ನವರು ಅಸ್ಪೃಶ್ಯರು ಎಂಬ ಅರಿವು ಅನುಭವಗಳು ಮಡುಗಟ್ಟಿ ನಿಲ್ಲತೊಡಗಿದುವು.

ಸವರ್ಣೀಯರಾದವರ ಮಲ-ಮೂತ್ರಗಳನ್ನು ತನ್ನವರು ತಲೆಯ ಮೇಲೆ ಹೊತ್ತು ಸಾಗಿಸಲೇಬೇಕು, ಸವರ್ಣೀಯರು ಸುರಿಯುವ ನೀರಿಗಾಗಿ ತನ್ನವರು ಬೊಗಸೆ-ಬಾಯಿಗಳನ್ನೊಡ್ಡಬೇಕು, ಅವರು ಎಸೆಯುವ ಎಂಜಲು ಕೂಳಿಗಾಗಿ ತನ್ನವರು ಕಾಯುತ್ತ ಕೈಯೊಡ್ಡಬೇಕು, ಸಾರ್ವಜನಿಕ ಬಳಕೆಯ ಬಾವಿ-ಕೆರೆಗಳ ನೀರನ್ನು ತನ್ನವರು ಮುಟ್ಟಲೇಬಾರದು- ಮುಟ್ಟಿದ್ದಾದರೆ ಅಮಾನುಷವಾದ ಶಿಕ್ಷೆಯನ್ನು ಅನುಭವಿಸಬೇಕು.

ದೇವಾಲಯಗಳಿಗೆ ಪ್ರವೇಶವಿಲ್ಲ, ಜ್ಞಾನದೇಗುಲಗಳೆನಿಸಿದ್ದ ಶಾಲೆಗಳಲ್ಲಿಯೂ ಸಹಪಾಠಿಗಳಿಂದ ದೂರ, ಕಲಿಸುವ ಗುರುಗಳಿಂದಲೂ ಬಹಳ ದೂರ!

ಅಂಬೇಡ್ಕರ್ ಅಸ್ಪೃಶ್ಯನೆಂದು ತಿಳಿದ ಕೂಡಲೇ, ಆ ಹೋಟೆಲಿನವರು ಹೊರದೂಡಿ, ವಾಸ್ತವ್ಯಕ್ಕೆ ನೆಲೆ ದೊರಕದಿದ್ದಾಗ ಮರವೊಂದರ ಕೆಳಗೆ ಕುಳಿತು ಗಳಗಳನೆ ಅಳುತ್ತ "ಈ ಭೂಮಿಗಾದರೂ ಕರುಣೆ ಇದ್ದಿದ್ದರೆ ತನ್ನನ್ನು ತನ್ನವರನ್ನೂ ನುಂಗಿ ಈ ಕಿರುಕುಳ ಅವಮಾನಗಳಿಂದ ಪಾರುಮಾಡಬಹುದಿತ್ತು!" ಎಂದು ಶಪಿಸಿಕೊಳ್ಳುವ ಮಟ್ಟಕ್ಕೇ ಸಾಮಾಜಿಕ ಪರಿಸ್ಥಿತಿ ಬೆಳೆದಿತ್ತು, ಬಿಗಡಾಯಿಸಿತ್ತು. ಆ ಸಾಮಾಜಿಕ ಕ್ರೌರ್ಯ, ಆ ಅಸಮಾನತೆಗಳು ನಾಳೆಯಲ್ಲ ಇಂದೇ, ಇಂದಲ್ಲ ಈಗಲೇ ನಿವಾರಣೆಯಾಗಬೇಕು ಎಂಬ ತವಕ-ತುಡಿತ ಅಂಬೇಡ್ಕರರದ್ದಾಯಿತು. ದಲಿತರ ಉದ್ಧಾರಕಾರ್ಯ ಈ ದೇಶಿಯರಿಂದ ಆಗುವುದಿಲ್ಲ, ಆಳರಸರಿಂದಲೇ ಆಗಬೇಕು, ಕಾನೂನಿನ ಬಲದಿಂದಲೇ ಆಗಬೇಕು, ಉಳಿದದ್ದೆಲ್ಲ ಆಮೇಲೆ ಮಾತ್ರ ಎಂದು ಪ್ರತಿಪಾದಿಸುವಷ್ಟರ ಮಟ್ಟಿಗೆ ತರುಣ ಅಂಬೇಡ್ಕರರ ಮನಸ್ಸು ರೋಸಿ ಹೋಗಿತ್ತು.

ಸಮಾಜದ ಹುತ್ತದಲ್ಲಿ ಹುಟ್ಟಿ ಬೆಳೆದಿರುವ ಅಸ್ಪೃಶ್ಯತೆಯಂತಹ ಕೊಳಕುಮಂಡಲವನ್ನು ಪರಿವರ್ತನೆಯ ಪುಂಗಿಯಿಂದ ಮಾತ್ರವೇ ನಿಷ್ಕ್ರಿಯಗೊಳಿಸಬೇಕು, ಅದು ಮಾತ್ರವೇ ಪರಿಣಾಮಕಾರೀ ಹಾಗೂ ಶಾಶ್ವತ ಮಾರ್ಗವೆಂಬ ಅಭಿಪ್ರಾಯವನ್ನು ಹೊಂದಿದ್ದ ಗಾಂಧಿಜಿ, ಅಸ್ಪೃಶ್ಯತಾ ನಿವಾರಣಾ ಕಾರ್ಯವನ್ನು ತಮ್ಮ ಮನೆಯಿಂದ ಪ್ರಾರಂಭಿಸಿ, ಆಶ್ರಮ, ಸಮಾಜ ಮತ್ತು ರಾಷ್ಟ್ರಗಳ ಮಟ್ಟದಲ್ಲಿಯೂ ನಿವಾರಿಸುವ ಪ್ರಯತ್ನ ಮಾಡಿದರು. ಇವರ ಸೋದಾಹರಣ ಕಾಳಜಿ ಮತ್ತು ಅಂಬೇಡ್ಕರ್ ಅವರ ಅನುಭವ,

ಪ್ರಯತ್ನ ಮತ್ತು ಹೋರಾಟಗಳ ಪರಿಣಾಮವಾಗಿ ಅಸ್ಪೃಶ್ಯತಾ ನಿವಾರಣೆಗೆ ರಾಷ್ಟ್ರೀಯ ಜಾಗೃತಿ ಮೂಡಿತು, ಸ್ವಾತಂತ್ರ್ಯಾನಂತರ ಸಂವಿಧಾನಾತ್ಮಕ ಪರಿಹಾರವನ್ನೂ ಕಂಡುಕೊಳ್ಳಲಾಯಿತೆಂಬುದು ಐದೂವರೆ ದಶಕಗಳ ಮಾತು. ಈ ಅವಧಿಯಲ್ಲಿ ಈ ಸಾಮಾಜಿಕ ಕಳಂಕ ನಿವಾರಣೆಯಾಗಿದೆ ಎನ್ನುವುದಾದರೆ ಎಷ್ಟರ ಮಟ್ಟಿಗೆ ಆಗಿದೆ? ಪೂರ್ಣವಾಗಿ ನಿವಾರಣೆಯಾಗಿಲ್ಲವೆನ್ನವುದಾದರೆ ಏಕೆ ಆಗಿಲ್ಲ ಎಂಬುದನ್ನು ವಿಚಾರ ಮಾಡುವ ಅಗತ್ಯವಿದೆ.

ಅಸ್ಪೃಶ್ಯತೆಯ ವಿರುದ್ಧ ಕಾನೂನು ಜಾರಿಯಲ್ಲಿರುವ ಕಾರಣ ಈ ಕಳಂಕವು ಬಹಿರಂಗದಲ್ಲಿ ತೊಲಗಿರುವಂತೆ ಕಂಡು ಬರುತ್ತದೆ. ಏಕೆಂದರೆ ಎಲ್ಲರೂ ಸಾರ್ವಜನಿಕ ಬಸ್ಸಿನಲ್ಲಿ ಪ್ರಯಾಣಿಸುವ ಸಾರ್ವಜನಿಕ ಕಾರ್ಯಾಲಯಗಳಲ್ಲಿ ಒಟ್ಟಿಗೆ ಕೆಲಸ ಮಾಡುವ, ಹೋಟೆಲ್‌ಗಳಲ್ಲಿ ತಿನ್ನುವ, ಶಾಲೆಗಳಲ್ಲಿ ಒಟ್ಟಿಗೆ ಕಲಿಯುವ, ದೇವಾಲಯಗಳಿಗೆ ಪ್ರವೇಶಿಸುವ ವಾತಾವರಣ ಸೃಷ್ಟಿಯಾಗಿದೆ- ಇವೆಲ್ಲವೂ ಸಾಮಾನ್ಯೀಕರಣವಾಗಿರುವುದರ ಅಂದರೆ Generalisation ಆಗಿರುವುದರ ಸಲ್ಲಕ್ಷಣಗಳು; ಆದರೆ ನಾವು ಪರಸ್ಪರ ಸಮಾಜೀಕರಣವಾಗಿರುವುದರ ಅಂದರೆ Socialisation ಆಗಿರುವುದರ ಚಿಹ್ನೆಗಳು ಮಾತ್ರ ಕಂಡುಬರುತ್ತಿಲ್ಲ. ಏಕೆಂದರೆ ಅಸ್ಪೃಶ್ಯರಾದವರ ಮತ್ತು ಸ್ಪೃಶ್ಯರೆನಿಸಿದವರ ಮನೆ-ಮಂದಿಗಳಲ್ಲಿ ಸಾಮಾಜಿಕವಾಗಿ ನೆರವೇರುವ ಮಂಗಳ-ಅಮಂಗಳ ಕಾರ್ಯಗಳಿಗೆ ಪರಸ್ಪರ ಹೋಗಿ ಬರುವ ಪ್ರಕ್ರಿಯೆ ಬಹಳ ಮಟ್ಟಿಗೆ ನಡೆಯುತ್ತಿಲ್ಲ ಸಾರ್ವಜನಿಕ ವಲಯದಲ್ಲಿ ಕಾಣೆಯಾಗುತ್ತಿರುವ ಈ ಕಳಂಕ ತನ್ನ ತೌರಾದ ಸಾಮಾಜಿಕ ನೆಲಗಟ್ಟಿನಲ್ಲಿ ಹಾಗೆಯೇ ಉಳಿದಿದೆ ಎಂಬುದು ನಂಬಲೇ ಬೇಕಾದ ಅಪ್ರಿಯ ಸಂಗತಿ.

ಈ ಸಾಮಾನ್ಯೀಕರಣದಿಂದ, ಅಸ್ಪೃಶ್ಯವರ್ಗದ ನಾಯಕರು ತೃಪ್ತರಾದಂತೆ ಕಂಡುಬರುತ್ತಿದೆ. ಶೈಕ್ಷಣಿಕ ,ಔದ್ಯೋಗಿಕ ಮತ್ತು ರಾಜಕೀಯ ಸೌಲಭ್ಯ-ಪ್ರಾತಿನಿಧ್ಯಗಳೂ, ಮೇಲಾಗಿ ಕಾನೂನು ಆಧಾರಿತ ರಕ್ಷಣೆಯೂ ಖಾತ್ರಿಯಾಗಿ ದೊರೆಯುತ್ತಿರುವ ಕಾರಣ, ಸಮಾಜೀಕರಣವಾಗಬೇಕು; ಸೌಹಾರ್ದವಾತಾವರಣ ಸೃಷ್ಟಿಯಾಗಬೇಕು ಎಂಬ ಅಭಿಪ್ರಾಯ ಕಂಡು ಬರುತ್ತಿಲ್ಲ, ಅದು ಬೇಕಾಗಿಯೂ ಇಲ್ಲ. ಇದಕ್ಕೆ ತಕ್ಕಂತೆ, ಮೇಲಿನ ಶ್ರೇಣಿಯವರಲ್ಲಿ ಸಮಾಜೀ ಕರಣವಾಗಬೇಕೆಂಬುದರ ಬಗ್ಗೆ ಸಹಮನೋಭಾವ, ಮನೋಸಿದ್ಧತೆಗಳೂ ಕಾಣುತ್ತಿಲ್ಲ.

ಮಿಸಲು ಸೌಲಭ್ಯಗಳು ಸಂವಿಧಾನ ಜಾರಿಯಾದಂದಿನಿಂದ ೧೦-೧೫ ವರ್ಷಗಳವರೆಗೆ ಎಂದಿದ್ದರೂ, ಅವುಗಳನ್ನ ಕಳೆದುಕೊಳ್ಳಲಾಗಲಿ (ಫಲಾನುಭವಿಗಳಾಗದ ಮೊದಲ ತಲೆಮಾರಿನವರಿಗೆ ದೊರೆಯಲೇಬೇಕು), ವಿಧಾನಾತ್ಮಕವಾಗಿ ಕಡಿತಗೊಳಿಸಲಾಗಲಿ ಸಾಧ್ಯವಾಗುತ್ತಿಲ್ಲವೆಂಬುದು ಅಸಹಾಯಕರಾಜಕೀಯ ಅಥವಾ ಗರ ಬಡಿದ ರಾಜಕೀಯ!

ಸೌಲಭ್ಯಗಳನ್ನು ಅನುಭವಿಸಲು ಅಸ್ಪೃಶ್ಯತೆಯನ್ನು ಪರೋಕ್ಷವಾಗಿ ಮುಂದುವರಿಸ ಬಯಸುವ ವರ್ಗ ಒಂದು ಕಡೆಯಾದರೆ, ಸಮಾಜೀಕರಣದಂತಹ ಪರಿವರ್ತನೆಗೆ ಸಿದ್ಧವಿಲ್ಲದ ಸಂಪ್ರದಾಯ ವರ್ಗ ಇನ್ನೊಂದು ಕಡೆ ಇರುವುದರಿಂದ ಹಗ್ಗದ ಜಗ್ಗಾಟ (ಟಗ್ ಆಫ್ ವಾರ್) ನಡೆದಿದೆ. ಅಸ್ಪೃಶ್ಯತೆಯ ಕಗ್ಗಂಟು ಮಾತ್ರ, ಸ್ವಲ್ಪ ಹೆಚ್ಚು-ಕಡಿಮೆ ಎಲ್ಲಿರ ಬೇಕೋ ಅಲ್ಲಿಯೇ ಇದೆ-ಇರುತ್ತದೆ; ಉಭಯತ್ರರಿಗೂ ಸದ್ಬುದ್ಧಿ ಬರುವ ತನಕ!

***

ರಾಜಕೀಯ ಅಧಿಕಾರ ಮತ್ತು ಸಾಮಾಜಿಕ ಸುಧಾರಣೆ

–ಮಹಾತ್ಮಗಾಂಧಿ.

ರಾಜಕೀಯ ಅಧಿಕಾರವಿಲ್ಲದೆ ಯಾವುದೇ ದೊಡ್ಡ ಸುಧಾರಣೆಯನ್ನು ಮಾಡಲು ಸಾಧ್ಯವಿಲ್ಲವೆಂದು ನಿಮಗೆ ಅನಿಸುವುದಿಲ್ಲವೆ?

ಹಲವಾರು ಕೆಲಸಗಳನ್ನು ಮಾಡಲು ವಿಫಲವಾದಾಗ ಈ ವಾದವನ್ನು ಒಂದು ನೆಪವನ್ನಾಗಿ ಮುಂದಿಡಲಾಗುತ್ತದೆ. ರಾಜಕೀಯ ಶಕ್ತಿಯಿಲ್ಲದೆ ಸಾಧಿಸಲಾರದೆ ಇರುವಂಥ ಕೆಲವು ನಿರ್ದಿಷ್ಟ ವಿಷಯಗಳಿವೆಯೆಂಬುದನ್ನು ನಾನು ಒಪ್ಪುತ್ತೇನೆ. ಆದರೆ ರಾಜಕೀಯ ಅಧಿಕಾರವನ್ನು ಅವಲಂಬಿಸಿದೆ ಇರುವಂಥ ನೂರಾರು ವಿಷಯಗಳಿವೆ. ಆದ್ದರಿಂದಲೆ ಥೋರೊನಂಥ ವಿಚಾರವಾದಿ "ಅತ್ಯಂತ ಕಡಿಮೆ ಆಳ್ವಿಕೆ ನಡೆಸುವ ಸರ್ಕಾರವೆ ಶ್ರೇಷ್ಠ" ಎಂಬುದಾಗಿ ಹೇಳಿದ್ದು. ಇದರ ಅರ್ಥವೇನೆಂದರೆ ಜನರಿಗೆ ರಾಜಕೀಯ ಅಧಿಕಾರ ಸಿಕ್ಕಿತೆಂದರೆ ಜನರ ಸ್ವಾತಂತ್ರ್ಯದಲ್ಲಿ ಸರ್ಕಾರದ ಮಧ್ಯೆ ಪ್ರವೇಶವು ಕಡಿಮೆ ಪ್ರಮಾಣಕ್ಕೆ ಇಳಿಯುತ್ತದೆ. ತನ್ನ ವ್ಯವಹಾರಗಳನ್ನು ಸರಾಗವಾಗಿ ನಡೆಸಿಕೊಂಡು ಹೋಗುವ ದೇಶವು ಮತ್ತು ರಾಜ್ಯ ಶಕ್ತಿಯ ಪ್ರವೇಶವಿಲ್ಲದೆ ಪರಿಣಾಮಕಾರಿಯಾಗಿ ಆಡಳಿತವನ್ನು ನಡೆಸಿಕೊಂಡು ಹೋಗುವ ದೇಶವು ನಿಜವಾದ ಅರ್ಥದಲ್ಲಿ ಪ್ರಜಾತಾಂತ್ರಿಕವಾಗಿರುತ್ತದೆ. ಎಲ್ಲಿ ಇಂಥ ಪರಿಸ್ಥಿತಿಯಿರುವುದಿಲ್ಲವೊ ಅಲ್ಲಿ ಸರ್ಕಾರವು ಹೆಸರಿಗೆ ಮಾತ್ರ ಪ್ರಜಾತಾಂತ್ರಿಕವಾಗಿರುತ್ತದೆ. ವಿಚಾರ ಸ್ವಾತಂತ್ರ್ಯದಲ್ಲಿ ಖಂಡಿತವಾಗಿಯೂ ಯಾವುದೇ ಮಿತಿಯಾಗಲಿ, ನಿರ್ಬಂಧವಾಗಲಿ ಇರುವುದಿಲ್ಲ. ಇತ್ತೀಚಿಗಿನ ದಿನಗಳಲ್ಲಿ ಅನೇಕ ಸಮಾಜ ಸುಧಾರಕರು ಒಂದು ಹೊಸ ಸಿದ್ಧಾಂತದ ಬಗ್ಗೆ ಬಹಳ ಒತ್ತನ್ನು ಕೊಡುತ್ತಿದ್ದಾರೆ. ನಮ್ಮಲ್ಲಿಯ ಎಷ್ಟು ಜನರು ಬದಲಾವಣೆಗೆ ಸಿದ್ಧರಾಗಿದ್ದೇವೆ? ಆಧುನಿಕ ವಿಜ್ಞಾನಿಗಳು ವಿಚಾರದ ಶಕ್ತಿಯನ್ನು ಮಾನ್ಯ ಮಾಡುತ್ತಾರೆ. ಆದ್ದರಿಂದಲೆ ಮನುಷ್ಯ ಯಾವ ರೀತಿ ಯೋಚಿಸುತ್ತಾನೊ ಅದೇ ರಿತೀ ಅವನು ಆಗುತ್ತಾನೆಂದು ಹೇಳಲಾಗುತ್ತದೆ. ಯಾವನು ಯಾವಾಗಲು ಕೊಲೆಯ ಬಗ್ಗೆ ಯೋಚಿಸುತ್ತಾನೊ ಅವನು ಕೊಲೆಗಡುಕನಾಗುತಾನೆ ಮತ್ತು ಯಾರು ಅನೈತಿಕ ದೈಹಿಕ ಸಂಬಂಧವನ್ನು ಇಟ್ಟುಕೊಳ್ಳುತ್ತಾರೊ ಅವರು ಅಧಃಫತನಗೊಳ್ಳುತ್ತಾರೆ. ಆದರೆ ಇದಕ್ಕೆ ವಿರುದ್ಧವಾಗಿ

ಯಾರು ಯಾವಾಗಲೂ ಸತ್ಯ ಮತ್ತು ಅಹಿಂಸೆಯ ಬಗ್ಗೆ ಆಲೋಚಿಸುತ್ತಾರೊ ಅವರು ಸತ್ಯವಂತರೂ ಮತ್ತು ಅಹಿಂಸಾವಾದಿಗಳೂ ಆಗುತ್ತಾರೆ ಮತ್ತು ಯಾರ ವಿಚಾರಗಳು ದೇವರನ್ನು ಕುರಿತಾಗಿರುತ್ತವೊ ಅವರು ಸಜ್ಜನರಾಗುತ್ತಾರೆ. ಈ ಪ್ರಕಾರದ ವಿಚಾರ ಸರಣಿಯಲ್ಲಿ ರಾಜಕೀಯ ಆಧಿಕಾರದ ವಿಚಾರ ಯಾವ ಸ್ಥಾನವನ್ನೂ ಪಡೆಯುವುದಿಲ್ಲ ಹಾಗೆಯೇ ರಾಜಕೀಯ ಅಧಿಕಾರ ಇರುವುದು ಅಥವಾ ಇಲ್ಲದಿರುವುದರ ಪರಿಣಾಮ ನಮ್ಮ ಅನೇಕ ಚಟುವಟಿಕೆಗಳ ಮೇಲೆ ಆಗುವುದೇ ಇಲ್ಲ. ಇಲ್ಲಿ ನಾನೊಂದು ಸಲಹೆಯನ್ನು ಕೊಡ ಬಯಸುತ್ತೇನೆ. ಪ್ರತಿಯೊಬ್ಬರೂ ತಮ್ಮ ಎಲ್ಲ ಚಟುವಟಿಕೆಗಳತ್ತ ಗಮನ ಹರಿಸಲಿ. ಆಗ ಅವರಿಗೆ ಯಾವುದೇ ರಾಜಕೀಯ ಅಧಿಕಾರ ಇಲ್ಲದೆಯೆ ಸ್ವತಂತ್ರವಾಗಿ ತಾವು ಆ ಕೆಲಸಗಳನ್ನು ಮಾಡಿರುವುದು ಗೊತ್ತಾಗುತ್ತದೆ. ಪ್ರತಿಯೊಬ್ಬನೂ ತನ್ನ ಸ್ವಾತಂತ್ರ್ಯಕ್ಕಾಗಿ ತಾನೇ ಆಲೋಚಿಸಬೇಕಾಗುತ್ತದೆ. ಅವನಲ್ಲಿ ಸ್ವಾತಂತ್ರ್ಯದ ಇಚ್ಛಾಶಕ್ತಿ ಮೂಡಿದೊಡನೆಯೆ ಅವನು ಸ್ವತಂತ್ರನಾಗುತ್ತಾನೆ.

ಇನ್ನು ದೊಡ್ಡ ಸುಧಾರಣೆಯ ಮಾತು. ಯಾರು ಚಿಕ್ಕ ಚಿಕ್ಕ ಸುಧಾರಣೆಗಳಿಗೆ ಸಿದ್ಧರಿಲ್ಲವೊ ಅಂತವರು ದೊಡ್ಡ ಸುಧಾರಣೆಗಳಿಗೆ ಎಂದೂ ಸಿದ್ಧವಾಗುವುದಿಲ್ಲ. ಯಾರು ತನ್ನಲ್ಲಿರುವ ಒಳ್ಳೆಯ ಗುಣಗಳನ್ನು ಬಲಪಡಿಸುತ್ತಾ ಹೋಗುವರೊ ಮೊದಲು ಯಾವುದು ಅವನಿಗೆ ದೊಡ್ಡ ಸುಧಾರಣೆಯೆಂದು ತೋರಿತ್ತೊ ಅದು ನಿಜವಾಗಿಯೂ ಚಿಕ್ಕದಾಗಿತ್ತೆಂದು ಗೊತ್ತಾಗುತ್ತದೆ. ಹೀಗೆ ಯಾರು ತಮ್ಮ ಜೀವನವನ್ನು ರೂಪಿಸಿಕೊಳ್ಳುತ್ತಾರೊ ಅವರು ನಿಜವಾದ ಸಹಜ ಜೀವನವನ್ನು ನಡೆಸುತ್ತಾರೆ. ಇಂಥ ಜೀವನಕ್ರಮವನ್ನು ಸಾಧಿಸಲು ರಾಜಕೀಯ ಗುರಿಯನ್ನು ಮರೆತುಬಿಡಬೇಕು. ಪ್ರತಿಯೊಂದು ವಿಷಯದಲ್ಲಿ ಮತ್ತು ಪ್ರತಿಯೊಂದು ಹೆಜ್ಜೆಯಲ್ಲಿ ರಾಜಕೀಯ ಗುರಿಯ ಬಗ್ಗೆ ಆಲೋಚಿಸುವುದೆಂದರೆ ಅನಾವಶ್ಯಕವಾಗಿ ಧೂಳು ಎಬ್ಬಿಸಿದಂತೆ. ಯಾವುದನ್ನು ತಪ್ಪಿಸಿಲಿಕ್ಕಾಗುವುದಿಲ್ಲವೊ ಅಂತದನ್ನು ಕುರಿತು ಏಕೆ ಚಿಂತಿಸಬೇಕು? ನಿಜವಾದ ಸಾವು ಬರುವ ಮೊದಲೆ ಏಕೆ ಸಾಯಬೇಕು?


ಆದ್ದರಿಂದ ನಾನು ಅನ್ನಾಂಗಗಳ ಬಗ್ಗೆ ಚರ್ಚಿಸುವ ವಿಷಯದಲ್ಲಿ ಬಹಳ ತೀವ್ರತಮವಾದ ಆಸಕ್ತಿಯನ್ನು ವಹಿಸುತ್ತೇನೆ. ಅದೇ ರೀತಿ ಸೊಪ್ಪು ಮತ್ತು ಕೊಟ್ಟಣದ ಅಕ್ಕಿಯ ವಿಷಯವಾಗಿ. ಆದ್ದರಿಂದಲೆ ನಮ್ಮ ಶೌಚಾಲಯಗಳನ್ನು ಉತ್ತಮವಾಗಿ ಹೇಗೆ ಸ್ವಚ್ಛಗೊಳ್ಳಿಸಬೇಕೆಂಬ ವಿಷಯವೂ ನನಗೆ ಬಹಳ ಆಸಕ್ತಿದಾಯಕ ವಿಷಯವಾಗಿದೆ. ಅದೇ ರೀತಿ ಪ್ರತಿದಿನ ಬೆಳಿಗ್ಗೆ ಭೂಮಿ

ತಾಯಿಯನ್ನು ಹೊಲಸು ಮಾಡುವ ಕ್ರಿಯೆಯಿಂದ ನಮ್ಮ ಜನರನ್ನು ಹೇಗೆ ದೂರವಿಡಬೇಕೆಂಬುದು ಸಹ ನನಗೆ ಅಷ್ಟೇ ಆಸಕ್ತಿದಾಯಕ ವಿಷಯವಾಗಿದೆ. ಇಂಥ ಇತರ ಅಗತ್ಯ ಸಮಸ್ಯೆಗಳನ್ನು ಕುರಿತು ಮತ್ತು ಅವುಗಳಿಗೆ ಪರಿಹಾರವನ್ನು ಹುಡುಕುವುದು ಯಾವ ರೀತಿ ರಾಜಕೀಯ ಮಹತ್ವ ಹೊಂದಿಲ್ಲವೆಂಬುದು ನನಗೆ ಅರ್ಥವಾಗುವುದಿಲ್ಲ. ನಾನು ಯಾವ ಕೆಲಸವನ್ನು ಮಾಡುತ್ತಿದ್ದೆನೆಯೊ ಮತ್ತು ಜನಸಾಮಾನ್ಯರು ಸಹ ಮಾಡಬೇಕೆಂದು ಹೇಳುತ್ತಿದ್ದೆನೆಯೊ ಆ ಎಲ್ಲ ಕೆಲಸಗಳನ್ನು ದೇಶದ ಕೋಟ್ಯಾವಧಿ ಜನರು ಸುಲಭವಾಗಿ ಮಾಡಬಹುದು ಆದರೆ ಆಡಳಿತಗಾರರ ನೀತಿಯನ್ನು ಒರೆಗೆ ಹಚ್ಚುವ ಕೆಲಸವು ಅವರ ಶಕ್ತಿಗೆ ಮೀರಿದುದಾಗಿರಬಹುದು. ಅದು ಕೆಲವೇ ಜನರ ಕೆಲಸವಾಗಿದೆಯೆಂಬುದನ್ನು ನಾನು ನಿರಾಕರಿಸುದಿಲ್ಲ. ನೀತಿ ನಿರ್ಧಾರದ ಕೆಲಸವನ್ನು ಯೋಗ್ಯತೆವುಳ್ಳವರು ಅದನ್ನು ತಮ್ಮ ಸಾಮರ್ಥ್ಯಕ್ಕನುಸಾರವಾಗಿ ಉತ್ತಮ ರೀತಿಯಲ್ಲಿ ನಿರ್ವಹಿಸಲಿ. ಆದರೆ ಈ ಮುಖಂಡರು ದೊಡ್ಡ ಸುಧಾರಣೆಗಳನ್ನು ಸಾಕಾರಗೊಳಿಸುವವರೆಗೆ ನನ್ನಂಥ ಜನಕೋಟಿಯು ದೇವರು ಕೊಟ್ಟಿರುವಂಥ ಸಹಜ ಶಕ್ತಿಯ ಲಾಭವನ್ನು ತಮ್ಮ ಅತ್ಯುತ್ತಮ ಲಾಭಕ್ಕಾಗಿ ಏಕೆ ಮಾಡಿಕೊಳ್ಳಬಾರದು? ಸೇವೆಗಾಗಿ ತಮ್ಮ ಶರೀರಗಳನ್ನು ಉತ್ತಮ ಸಾಧನಗಳನ್ನಾಗಿ ಏಕೆ ಮಾಡಿಕೊಳ್ಳಬಾರದು? ತಮ್ಮ ಬಾಗಿಲ ಮುದಿಂನ ಅಂಗಳವನ್ನು ಮತ್ತು ಸುತ್ತಲಿನ ಪರಿಸರವನ್ನು ಏಕೆ ಸ್ವಚ್ಛಗೊಳಿಸಬಾರದು? ಅಧಿಕಾರ ದೊರೆತಾದ ಮೇಲೆ ನಾವು ಕೆಲಸಮಾಡುತ್ತೇವೆಂಬುದು ನಮ್ಮ ಸೋಮಾರಿತವನ್ನು ಹಾಗೂ ಹತಾಶಾ ಮನೋಭಾವನೆಯನ್ನು ತೋರಿಸುತ್ತದೆ. ಆದ್ದರಿಂದ ಪ್ರತಿಯೊಬ್ಬ ಪುರುಷ, ಮಹಿಳೆ, ಯುವಕ ಮತ್ತು ವೃದ್ಧ ಎಲ್ಲರೂ ಈ ಮಹಾನ್ ತ್ಯಾಗದಲ್ಲಿ ಭಾಗಿಯಾಗಲು ಕರೆ ಕೊಡುತ್ತೇನೆ.

***

ಜನಪದ ನಿಲಯದ ಅಂತರಂಗದಲ್ಲಿ........೩೩

-ಸುರೇಂದ್ರ ಕೌಲಗಿ.



೧೯೬೩ ರಲ್ಲಿ "ಕರುಣಾಗೃಹ" ವೆಂಬ ಹೆಸರಿನಲ್ಲಿ ಅಂಗವಿಕಲ ಮಕ್ಕಳಿಗಾಗಿ ವಸತಿ ಸೌಕರ್ಯವುಳ್ಳ ಕೇಂದ್ರವೊಂದನ್ನು ಪ್ರಾರಂಭಿಸಿದೆ. ಈ ಕೇಂದ್ರಕ್ಕೆ ಕರುಣಾಗೃಹ ಎಂಬ ಹೆಸರನ್ನಿಡಲು ಮುಖ್ಯ ಕಾರಣ ಸಮಾಜದಲ್ಲಿರುವ ದುರ್ಬಲರ ಬಗ್ಗೆ ಪ್ರತಿಯೊಬ್ಬರೂ ಅನುಕಂಪ ಹೊಂದಿರಬೇಕಾದುದು ಮಾನವ ಧರ್ಮ. ಈ ಮಾನವ ಧರ್ಮವು ವ್ಯವಹಾರಿಕವಾಗಿ ಪ್ರಕಟಗೊಳ್ಳುವುದಕ್ಕೆ ಸಹಕಾರಿಯಾಗುವುದೆಂಬುದರ ಸಂಕೇತವಾಗಿ ಕರುಣಾಗೃಹ ಎಂಬ ಹೆಸರನ್ನಿಡಲು ಬಯಸಿದೆ. ಈ ಹೆಸರಿನ ಬಲವೊ ಎಂಬಂತೆ ಈ ಕಾರ್ಯಕ್ರಮಕ್ಕೆ ಸಮಾಜ ಅದ್ಭುತವಾಗಿ ಸ್ಪಂದಿಸಿತು. ಪ್ರಾರಂಭದಲ್ಲಿ ಕರುಣಾಗೃಹಕ್ಕಾಗಿ ಸ್ವಂತ ಕಟ್ಟಡವಿರಲಿಲ್ಲ. ಸೂಕ್ತ ಕಟ್ಟಡವನ್ನು ಕಟ್ಟಿ ಕರುಣಾಗೃಹವನ್ನು ಪ್ರಾರಂಭಿಸುವ ತಾಳ್ಮೆಯಾಗಲಿ, ಸಾಮರ್ಥ್ಯವಾಗಲಿ ನನ್ನಲ್ಲಿರಲಿಲ್ಲ. ಟ್ರಸ್ಟಿನಲ್ಲಿ ನಿಧಿಯೂ ಇರಲಿಲ್ಲ. ಒಳ್ಳೆಯ ಕಾರ್ಯಕ್ರಮದ ಯೋಚನೆ ಮನಸ್ಸಿನಲ್ಲಿ ಮೂಡಿದೆ. ಇನ್ನು ತಡಮಾಡುವುದು ಸರಿಯಲ್ಲವೆಂದೆನಿಸಿ ಇರುವ ಪರಿಸ್ಥಿತಿಯಲ್ಲೆ ಕಾರ್ಯಕ್ರಮವನ್ನು ಪ್ರಾರಂಭಿಸಲು ತೀರ್ಮಾನಿಸಿದೆ. ಆಗ ನಾನು ವಾಸವಾಗಿದ್ದ ಕಲ್ಯಾಣಿ ಬೀದಿಯಲ್ಲಿಯೆ ಒಂದು ಹಳೆಯ ಮನೆ ಖಾಲಿಯಿದ್ದುದು ಗೊತ್ತಾಯಿತು. ಆ ಮನೆಯಲ್ಲಿ ಬಿದಿರಿನ ಕೆಲಸ ಮಾಡುವ ಲಿಂಗಶೆಟ್ಟಿ ಎಂಬುವವರು ವಾಸವಾಗಿದ್ದರು. ಅವರು ಒಂದು ಹಸುವನ್ನು ಸಹ ಆ ಮನೆಯಲ್ಲಿ ಕಟ್ಟಿಕೊಂಡಿದ್ದರು. ಮಣ್ಣಿನ ನೆಲ, ಒಂದೇ ಕಿಟಕಿ ಮತ್ತು ನಾಡಹೆಂಚಿನ ಮನೆ ಅದಾಗಿತ್ತು. ಮುಂಭಾಗದಲ್ಲಿ ಪ್ರವೇಶದ್ವಾರದ ಅಕ್ಕ ಪಕ್ಕದಲ್ಲಿ ಜಗಲಿಗಳು ಇದ್ದವು. ಮನೆಯ ಹಿಂಭಾಗದಲ್ಲಿ ಹಿತ್ತಲು ಮತ್ತು ಒಂದು ನೆಲಬಾವಿಯಿತ್ತು. ಈ ಮನೆ ದೇಶಿಕ ಕೈಂಕರ್ಯ ಸಭೆ ಎಂಬ ಸಂಸ್ಥೆಗೆ ಸೇರಿದುದಾಗಿತ್ತು. ಆಗ ಈ ಸಂಸ್ಥೆಯ ಕಾರ್ಯದರ್ಶಿಯಾಗಿ ರಾಮಸ್ವಾಮಿ ಅಯ್ಯಂಗಾರ್ ಎಂಬುವವರಿದ್ದರು. ಅವರು ಸಾಮಾನ್ಯವಾಗಿ ದಿನಾಲೂ ನಾನು ವಾಸವಾಗಿದ್ದ ಮನೆಯ ಮುಂದೆಯೆ ಕಲ್ಯಾಣಿಗೆ ಸ್ನಾನಕ್ಕಾಗಿ ಹೋಗುತ್ತಿದ್ದರು. ಹೀಗಾಗಿ ನನಗೆ ಅವರ ಪರಿಚಯವಾಗಿತ್ತು. ಒಂದು ದಿನ ಅವರ ಭೇಟಿಯಾದಾಗ ನಾನು ಅವರಿಗೆ ಅಂಗವಿಕಲರ ಕೇಂದ್ರ ಪ್ರಾರಂಭಿಸುವ ಬಗ್ಗೆ ಪ್ರಸ್ತಾಪಿಸಿದೆ. ಮತ್ತು ಅವರ ಸಂಸ್ಥೆಗೆ ಸೇರಿದ ಮನೆಯನ್ನು ಕರುಣಾಗೃಹದ ಉಪಯೋಗಕ್ಕಾಗಿ ಕೊಡಬಹುದೆ ಎಂಬುದಾಗಿ ವಿಚಾರಿಸಿದೆ. ಅವರು ಈ ವಿಚಾರವನ್ನು ತಿಳಿದು ಸಂತೋಷಪಟ್ಟರು ಮತ್ತು ಆ ಮನೆಯನ್ನು ಕಡಿಮೆ ಬಾಡಿಗೆಯಲ್ಲಿ ಕೊಡುವುದಾಗಿ ಹೇಳಿದರು ಹೀಗೆ ಸ್ಥಳದ ವ್ಯವಸ್ಥೆಯಾದ ಮೇಲೆ ಕೇಂದ್ರವನ್ನು

ಪ್ರಾರಂಭಿಸುವ ಸಿದ್ಧತೆಯನ್ನು ಮಾಡಿಕೊಳ್ಳಲು ಪ್ರಾರಂಭಿಸಿದೆ. ಅಂಗವಿಕಲ ಮಕ್ಕಳೊಂದಿಗೆ ಕೆಲಸ ಮಾಡುವ ಅನುಭವ ನನಗೆ ಇರಲಿಲ್ಲವಾದ್ದರಿಂದ ಪ್ರಾರಂಭದಲ್ಲಿ ಬಹಳಷ್ಟು ಅಧೈರ್ಯದಿಂದ ಕೂಡಿದ್ದೆ. ಅಂಗವಿಕಲರ ವಿವಿಧ ಸಮಸ್ಯೆಗಳ ಬಗ್ಗೆಯೂ ಅಂಥ ಹೆಚ್ಚಿನ ತಿಳುವಳಿಕೆ ಇರಲಿಲ್ಲ. ಆದ್ದರಿಂದ ಅಂಗವಿಕಲರ ಸಮಸ್ಯೆ, ಅವರ ಪುನರ್ವಸತಿ ಇತ್ಯಾದಿ ವಿಷಯಗಳ ಬಗ್ಗೆ ತಿಳಿದುಕೊಳ್ಳುವ ಪ್ರಯತ್ನ ಪ್ರಾರಂಭಿಸಿದೆ. ಇದೇ ಸಮಯಕ್ಕೆ ಬೆಂಗಳೂರಿನಲ್ಲಿ ಅಂಗವಿಕಲರಿಗಾಗಿ ಒಂದು ಸಂಸ್ಥೆ ಪ್ರಾರಂಭವಾಗಿತ್ತು. ಈ ಸಂಸ್ಥೆಯ ಹೆಸರು"ಅಂಗವಿಕಲರಿಗಾಗಿ ಸಂಸ್ಥೆ" "Association For the Physically Handicapped" (A.P.H.) ಈ ಸಂಸ್ಥೆಯನ್ನು ಪ್ರಾರಂಭಿಸಿದವರು ಶ್ರೀ ದಿವಾನ್ ಮತ್ತು ಹೇಮಾ ಅಯ್ಯಂಗಾರ್. ದಿವಾನ್‌ರವರು ಮಿಲಿಟರಿಯಲ್ಲಿದ್ದವರು. ಯಾವುದೋ ಒಂದು ಕಾರ್ಯಾಚರಣೆಯಲ್ಲಿ ತಮ್ಮ ಕಾಲುಗಳನ್ನು ಕಳೆದುಕೊಂಡು ಬೆಂಗಳೂರಿನಲ್ಲಿರುವ ಮಿಲಿಟರಿ ರೆಡ್ ಕ್ರಾಸ್ ಹೋಮ್‌ನ ನಿವಾಸಿಯಾಗಿದ್ದರು. ಇವರಲ್ಲಿ ಸಮಾಜಸೇವೆಯ ಉತ್ಕಟ ಇಚ್ಚೆಯಿತ್ತು ಆದರೆ ರೆಡ್ ಕ್ರಾಸ್ ಹೋಮ್‌ನಲ್ಲಿದ್ದುಕೊಂಡು ಸಮಾಜ ಸೇವೆ ಮಾಡಲು ಮುಖ್ಯಸ್ಥರು ಅವಕಾಶ ಕೊಟ್ಟಿರಲಿಲ್ಲ. ಆದ್ದರಿಂದ ದಿವಾನ್‌ರವರು ಬಹು ಬೇಸರಪಟ್ಟುಕೊಂಡಿದ್ದರು. ಒಮ್ಮೆ ಜಯಪ್ರಕಾಶ್ ನಾರಾಯಣ್‌ರು ಬೆಂಗಳೂರಿಗೆ ಬಂದಿದ್ದಾಗ ದಿವಾನ್‌ರವರು ಅವರನ್ನು ಭೇಟಿ ಮಾಡಿ ತಮ್ಮ ಪರಿಸ್ಥಿಯನ್ನು ವಿವರಿಸಿ ರೆಡ್ ಕ್ರಾಸ್ ಹೋಮ್‌ನ ಮುಖ್ಯಸ್ಥರ ಅನುಮತಿಯನ್ನು ದೊರಕಿಸಿ ಕೊಡಲು ಸಹಾಯ ಕೋರಿದರು. ಆ ಸಮಯದಲ್ಲಿ ನಾನು ಜಯಪ್ರಕಾಶರೊಂದಿಗಿದ್ದೆ. ಆಗ ನನಗೆ ದಿವಾನರ ಪರಿಚಯವಾಯಿತು. ಹೇಮಾ ಅಯ್ಯಂಗಾರ್ ಸಹ ತಮ್ಮ ಚಿಕ್ಕ ವಯಸ್ಸಿನಲ್ಲಿಯೆ ಪೋಲಿಂಯೋ ಕಾರಣದಿಂದಾಗಿ ತಮ್ಮ ಎರಡು ಕಾಲುಗಳನ್ನೂ ಕಳೆದುಕೊಂಡಂಥವರಾಗಿದ್ದರು. ವ್ಹೀಲ್ ಛೇರಿನಲ್ಲಿ ಕುಳಿತುಕೊಂಡೇ ಓಡಾಡುತಿದ್ದರೂ, ಹೇಮಾ ತುಂಬಾ ಚಟುವಟಿಕೆಯ ಮತ್ತು ಸಾಹಸಿ ಯುವತಿಯಾಗಿದ್ದರು. ಸ್ವತಃ ಅಂಗವಿಕಲರಾಗಿದ್ದುದರಿಂದ ಬೇರೆ ಅಂಗವಿಕಲರಿಗಾಗಿ ಸಹಾಯ ಮಾಡಬೇಕೆಂಬ ಉತ್ಕಟ ಇಚ್ಚೆಯುಳ್ಳವರಾಗಿದ್ದರು. ಹೇಮಾರವರ ಸಂಬಂಧಿಯೋರ್ವರು ಕಿರ್ಲೋಸ್ಕರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಅವರ ಸಹಾಯದಿಂದ ಮಲ್ಲೇಶ್ವರಂನಲ್ಲಿ ಒಂದು ಕಾರ್ ಷೆಡ್ಡಿನಲ್ಲಿ ಪುಟ್ಟ ಕೈಗಾರಿಕೆಯನ್ನು ಪ್ರಾರಂಭಿಸಿದರು. ಈ ಕೈಗಾರಿಯಲ್ಲಿ ಹತ್ತಿರದ ಅಂಗವಿಕಲರನ್ನು ಸೇರಿಸಿಕೊಂಡರು. ಮುಂದೆ ಇವರಿಗೂ ಮತ್ತು ದಿವಾನರಿಗೂ ಪರಿಚಯವಾದುದರಿಂದ ದಿವಾನರು ಸಹ ಹೇಮಾರವರೊಂದಿಗೆ ಕೈಗೂಡಿಸಿ ಅಂಗವಿಕಲರಿಗಾಗಿ ಇಬ್ಬರೂ ಸೇರಿ ಹೆಚ್ಚಿನ ಕೆಲಸವನ್ನು ಪ್ರಾರಂಭಿಸಿದರು.

ನಾನು ಮೇಲುಕೋಟೆಯಲ್ಲಿ ಪ್ರಾರಂಭಿಸಬೇಕೆಂದಿದ್ದ ಕರುಣಾಗೃಹದ ವಿಷಯವಾಗಿ ಹೆಚ್ಚಿನ ವಿಚಾರ ತಿಳಿದುಕೊಳ್ಳಲು ಬೆಂಗಳೂರಿಗೆ ಹೋಗಿ ದಿವಾನ್ ಮತ್ತು ಹೇಮಾ ರವರನ್ನು ಭೇಟಿ ಮಾಡಿದೆ.

(ಮುಂದುವರಿಯುವುದು...)

ಲೇಖಕ ಮಿತ್ರರಲ್ಲಿ ವಿನಂತಿ

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೆ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಹ ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ನಿಮ್ಮನ್ನು ಜನಪದ ವಿಚಾರದ ಲೇಖಕರ ಬಳಗಕ್ಕೆ ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(–ಸಂಪಾದಕರು)*

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820



ಶ್ರೀಮತಿ/ ಶ್ರೀ........ Sri N.K. Koulagi
E - 117, Ist floor
Block No- 4
Sriranga society
Thane West
Bombay-4000061

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Printing Press, Melkote on behalf of Janapada Seva Trust, ® . Melkote. Dist- mandya – 571431
Phone : 08236 – 298754 e-mail : janapada@yahoo.com